WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

# ಶ್ರೀ ಶಾರದಾ

ಮಾಸಪತ್ರಿಕೆ – 15 ಏಪ್ರಿಲ್ 2011

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**

ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.

ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.


ಫೋನ್ : 2531493 (0), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-11 ಸಂಚಿಕೆ-4 ಪುಟಗಳು-10 Registered Under No.J/UDP/1260/2009-2011 Dated from 01-12-2008 to 30-11-2011.

ಶೃಂಗೇರಿ ಜಗದ್ಗುರು ಮಹಾಸಂಸ್ಥಾನ ಮತ್ತು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯ ಸಂಬಂಧ – ಡಾ। ಎಚ್.ವಿ.ನರಸಿಂಹಮೂರ್ತಿ ಪುಟ–7

ಶ್ರೀ ಕೃಷ್ಣಾಯನ – ಕೆ. ಆತ್ಮಾರಾಮ ಶಾಸ್ತ್ರೀ, ಬೆಂಗಳೂರು ಪುಟ–2



ನಗುವ ಬೇಸಗೆ ಬಂದಿದೆ – ವೈ. ಶಂಕರನಾರಾಯಣ ರಾವ್, ಪಡುಬಿದ್ರಿ ಪುಟ–5

ನಮ್ಮ ಸಮಾಜದ ಒಂದು ಅಪೂರ್ವ ರತ್ನ ಡಾ। ಭಾರತಿ, ಮರವಂತೆ –ಮ.ನಾ.ಹೆಬ್ಬಾರ ಪುಟ–6





## ಮುಂಬಯಿ : ಯುಗಾದಿಗೆ ಮರಳಿದ ವಿಶ್ವಕಪ್–ವಿಜಯೋತ್ಸವ ''ಮೇರಾ ದೇಶ್ ಮಹಾನ್''

# ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿಷ್ಠಾ ಮಹೋತ್ಸವ ಆಚರಣೆ

ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ಪ್ರತಿಷ್ಠಾ ಮಹೋತ್ಸವವು ತಾ.14–3–2011ನೇ ಸೋಮವಾರದಂದು ಜರಗಿತು.

ನಮ್ಮ ಸಮಾಜದ ಪುರೋಹಿತರಾದ ಶ್ರೀ ಶಿವಪ್ರಸಾದ ಭಟ್‌ರವರಿಂದ ಬೆಳಿಗ್ಗೆ 9 ಗಂಟೆಯಿಂದ ಗಣಹೋಮ, ರುದ್ರಾಭಿಷೇಕ, ಶ್ರೀ ಚಕ್ರಪೂಜೆ ಇತ್ಯಾದಿ ಧಾರ್ಮಿಕ ವಿಧಿಗಳು ನಡೆದು ಸುಮಾರು 1 ಗಂಟೆಗೆ ಮಹಾಪೂಜೆ, ಬ್ರಾಹ್ಮಣ ಸುವಾಸಿನಿ ಆರಾಧನೆ ನಡೆದು ಪ್ರಸಾದ ವಿತರಿಸಲಾಯಿತು. ಹಾಗೆಯೇ ಮಧ್ಯಾಹ್ನ ನೆರೆದ ಸಮಾಜ ಬಂಧುಗಳಿಗೆ ಮತ್ತು ಪರಿಸರ ಭಕ್ತ ಜನರಿಗೆ ಭೋಜನ ಪ್ರಸಾದ ನಡೆಯಿತು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್, ಕಾರ್ಯದರ್ಶಿ, ಕೋಶಾಧಿಕಾರಿಯವರಲ್ಲದೆ ಆಡಳಿತ ಮಂಡಳಿಯ ಸದಸ್ಯರೂ, ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರೂ ಸೇರಿದ್ದರು. ಭೋಜನದ ಬಳಿಕ ಶಾರದಾ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯಕ್ರಮವೂ ನಡೆಯಿತು.



## ಶ್ರೀಶಾರದಾ ದೇವಸ್ಥಾನ

**ಶಾರದಾ ನಗರ, ಕುಂಜಿಬೆಟ್ಟು, ಉಡುಪಿ – 2. ಫೋನ್ : 2520754**

ಪ್ರಿಯರೇ,

ಸ್ವಸ್ತಿ ಶ್ರೀ ವಿಕೃತಿ ನಾಮ ಸಂ।ರದ ಮೇಷ ಮಾಸ ದಿನ ೧೫ ಸಲುವ ಚೈತ್ರ ಕೃಷ್ಣ ದ್ವಾದಶಿ ತಾ.29-04-2011ನೇ ಶುಕ್ರವಾರ ಸಂಜೆ ಗಂಟೆ 5-00ರಿಂದ **ಪ್ರತಿವರ್ಷದಂತೆ ಪರಿಸರದ ಭಕ್ತ ಬಾಂಧವರು ಭಕ್ತಿ–ಪ್ರೀತಿಯಿಂದ ಪೂಜಿಸಿಕೊಂಡು ಬರುತ್ತಿರುವ ಶ್ರೀಶಾರದಾ ಪರಮೇಶ್ವರೀ ಸನ್ನಿಧಿಯಲ್ಲಿ**

**ಸಾಮೂಹಿಕ ಶ್ರೀದುರ್ಗಾ ನಮಸ್ಕಾರ ಪೂಜೆಯು**


ನೆರವೇರಲಿದೆ. ಪಾಲ್ಗೊಳ್ಳಲಿರುವ ಭಕ್ತಾದಿಗಳು ಶ್ರೀಶಾರದಾ ಮಂಟಪದ ಮೆನೇಜರ್‌ರವರಲ್ಲಿ ರೂ.125/-ನ್ನು ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

ದುರ್ಗಾಮಾತೆಗೆ ಅರ್ಪಿಸಲು ಹಣ್ಣು, ಹೂವು ಇತ್ಯಾದಿಗಳನ್ನು ಪೂಜಾರಂಭಕ್ಕೆ ಮೊದಲು ತಂದು ನೀಡಬಹುದು. ಪೂಜೆಗೆ ಬರುವಾಗ ಹರಿವಾಣ, ಉದ್ಧರಣೆ ತರಬೇಕಾಗಿ ವಿನಂತಿ. ಅಪರಾಹ್ನ 3 ರಿಂದ : ದೀಪವಿಟ್ಟು ಮಂಡಲ ರಚನೆ, ಭಕ್ತರು ಹಾಗೂ ಋತ್ವಿಜರಿಂದ ಸಪ್ತಶತೀ ಪಾರಾಯಣ. ಸಂಜೆ 5 ರಿಂದ : ಶ್ರೀಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ಪ್ರಾರ್ಥನೆ, ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ, ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರ, ಮಹಾಪೂಜೆ, ತೀರ್ಥಪ್ರಸಾದ ವಿತರಣೆ, ಭೋಜನ ಪ್ರಸಾದ.

**– ಆಡಳಿತ ಮಂಡಳಿ**

## ಸೌರಮಾನ ಯುಗಾದಿಯ ಶುಭಾಶಯಗಳು

ನಮ್ಮ ಮೆಚ್ಚಿನ ಶ್ರೀಶಾರದಾ ಮಾಸ ಪತ್ರಿಕೆಯ ಆರಂಭದ ದಿನಗಳಿಂದಲೂ ಪತ್ರಿಕೆಯ ಬೆಳವಣಿಗೆಗೆ ಮತ್ತು ಯಶಸ್ಸಿಗೆ ಅಪಾರ ಕೊಡುಗೆಯನ್ನಿತ್ತ ಎಲ್ಲಾ ಆತ್ಮೀಯ ಸಮಾಜಬಾಂಧವರಿಗೆ, ಶ್ರೀಶಾರದಾ ವೇದಿಕೆಯ ಮಹಾಪೋಷಕರು, ಪೋಷಕರು, ದಾನಿಗಳು ಮತ್ತು ಆಜೀವ ಸದಸ್ಯರಿಗೆ, ಆಡಳಿತ ಮಂಡಳಿ ನಿರ್ದೇಶಕರಿಗೆ, ಯುವವೇದಿಕೆ, ಮಹಿಳಾ ವೇದಿಕೆ ಮತ್ತು ಇತರ ಎಲ್ಲಾ ವೇದಿಕೆಗಳ ಪದಾಧಿಕಾರಿಗಳು ಮತ್ತು ಸದಸ್ಯರಿಗೆ, ಜಾಹೀರಾತು ನೀಡಿದ ಮಹನೀಯರಿಗೆ, ಹಿರಿಯ, ಕಿರಿಯ ಸಾಹಿತಿಗಳಿಗೆ ಮತ್ತು ಲೇಖಕಮಿತ್ರರಿಗೆ, ಛಾಯಾಗ್ರಾಹಕರಿಗೆ, ಪತ್ರಿಕೆಗೆ ಆಕರ್ಷಕ ವಿನ್ಯಾಸ ಮೂಡಿಸಿ ಅಂದವಾಗಿ ಮುದ್ರಿಸುತ್ತಿರುವ ಶ್ರೀನಿಧಿ ಕಂಪ್ಯೂಟರ್ ಗ್ರಾಫಿಕ್ಸ್ ಮತ್ತು ಅಗ್ರಹಾರ ಆಫ್‌ಸೆಟ್ಸ್ ಇವರಿಗೆ, ಪ್ರತಿ ತಿಂಗಳೂ ಪತ್ರಿಕೆಯನ್ನು ಅಂಚೆಗೆ ರವಾನಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಹಕರಿಸಿದ ಮತ್ತು ಪ್ರಾಯೋಜಕತ್ವವನ್ನು ನೀಡಿದ ಪತ್ರಿಕೆಯ ಅಭಿಮಾನಿಗಳಿಗೆ ಮತ್ತು ಪ್ರೀತಿಯ ಓದುಗರಿಗೆ ಅನಂತ ಕೃತಜ್ಞತೆಗಳು.



ಮತ್ತೆ ಯುಗಾದಿ ಮರಳಿ ಬಂದಿದೆ. ನಮ್ಮ ಎಲ್ಲಾ ಸಮಾಜಬಾಂಧವರಿಗೆ ''ಸೌರಮಾನ ಯುಗಾದಿ'' ಸುಖ, ಶಾಂತಿ, ನೆಮ್ಮದಿ ಮತ್ತು ಸಮೃದ್ಧಿಯನ್ನು ತರಲಿ ಎಂದು ಹಾರೈಸುತ್ತೇವೆ.

–ಸಂಪಾದಕ ಮಂಡಳಿ

**ಡಾ। ದಯಾನಂದ ಎಸ್.ರಾವ್ ಎಜ್ಯುಕೇಶನ ಟ್ರಸ್ಟ್ ಬೆಂಗಳೂರು ಇವರು ''ರತ್ನಾ ಬ್ಯಾ ಸ್ಮಾರಕ ಸಾಲ ವಿದ್ಯಾರ್ಥಿ ವೇತನ''ಕ್ಕಾಗಿ ರೂ.4,00,000/- ನಗದು ನೀಡಿದ್ದಾರೆ. ಅವರಿಗೆ ಸಂಘವು ಕೃತಜ್ಞತೆಯನ್ನು ಸಲ್ಲಿಸುತ್ತದೆ.**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ), ಕುಂಜಿಬೆಟ್ಟು, ಉಡುಪಿ - 2.



ನಮ್ಮ ಸಂಘದ ಆಶ್ರಯದಲ್ಲಿ ಶ್ರೀ ಶಂಕರ ಜಯಂತಿ ಪ್ರಯುಕ್ತ

ತಾ.08-05-2011 ಆದಿತ್ಯವಾರ **ಸಾಮೂಹಿಕ ಉಪನಯನ**

ನೆರವೇರಲಿದೆ ಹಾಗೂ ಶ್ರೀಶಾರದಾ ಮಂದಿರದಲ್ಲಿ ವಿಶೇಷ ಪೂಜೆಯೂ ಜರಗಲಿದೆ. ಅದೇ ದಿನ ಬೆಳಗ್ಗೆ 11-00 ಗಂಟೆಗೆ **ಶ್ರೀ ಶಂಕರ ತತ್ವ ಆಧಾರಿತ ಪ್ರವಚನ** ಜರಗಲಿದೆ.

ಸರ್ವರಿಗೂ ಆದರದ ಸ್ವಾಗತ : – ಕಾರ್ಯದರ್ಶಿ

ಸಾಮೂಹಿಕ ಉಪನಯನದಲ್ಲಿ ಪಾಲ್ಗೊಳ್ಳಲಿರುವ ಆಸಕ್ತ ಸಮಾಜ ಬಾಂಧವರು ವಟುಗಳ ವಿವರಗಳನ್ನು ತಾ.02-05-2011ರ ಒಳಗೆ ಶ್ರೀಶಾರದಾ ಮಂಟಪದ ಮೆನೇಜರ್‌ರಿಗೆ ತಿಳಿಸಲು ವಿನಂತಿಸಲಾಗಿದೆ.

**ಸಂಪಾದಕ ಮಂಡಳಿ**

ವೈ. ಮೋಹನ ರಾವ್

ಎಚ್.ಎಸ್. ಶ್ಯಾನುಭಾಗ್

ಪ್ರಕಾಶ್ ರಾವ್ ಕೋಲ್ಪೆ

ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ನಮ್ಮ ಒಬ್ಬ ವಿದ್ಯಾರ್ಥಿ ಅತ್ಯಂತ ಪ್ರತಿಭಾವಂತನಾಗಿದ್ದು ವಿದ್ಯಾಭ್ಯಾಸವೆಲ್ಲಾ ಮುಗಿದ ನಂತರ ಯಾವುದೋ ಉದ್ಯೋಗಕ್ಕೆ ಸೇರಿಕೊಂಡ. ಶಾಲೆಯ ಮೇಲಿನ ಪ್ರೀತಿ ಯಿಂದ ಅಧ್ಯಾಪಕರ ಮೇಲಿನ ಅಭಿಮಾನ ದಿಂದ ಆಗಾಗ ಶಾಲೆಗೆ ಭೇಟಿ ನೀಡುತ್ತಿದ್ದ. ತನ್ನ ಎಲ್ಲಾ ಸಾಧನೆಗಳನ್ನೂ, ವೈಫಲ್ಯಗಳನ್ನೂ ನಮ್ಮ ಮುಂದೆ ಚಾಚೂ ತಪ್ಪದೆ ಒಪ್ಪಿಸುತ್ತಿದ್ದ.

ತನ್ನ ಸಾಧನೆ, ಶ್ರಮದಿಂದ ತನ್ನ ಉದ್ಯೋಗದಲ್ಲಿ ಉನ್ನತ ಹುದ್ದೆಗೇರಿ ಸಾಕಷ್ಟು ಸಂಬಳವನ್ನೂ, ಪ್ರತಿಷ್ಠೆಯನ್ನು ಪಡೆದಿದ್ದ.

ನಂತರದ ದಿನಗಳಲ್ಲಿ ನಮ್ಮ ಶಾಲೆಗೆ ಭೇಟಿ ನೀಡುವ ಮತ್ತು ನಮ್ಮನ್ನು ಭೇಟಿಯಾಗುವ ಸಂದರ್ಭಗಳು ಕಡಿಮೆ ಮಾಡಿಕೊಂಡ. ಹಲವು ವರ್ಷ ನಂತರ ಒಮ್ಮೆ ಯಾವುದೋ ಸಮಾರಂಭದಲ್ಲಿ ಸಿಕ್ಕಿ ಅವನನ್ನು ವಿಚಾರಿಸಿದಾಗ ನಮ್ಮ ಕಂಪನಿಯಲ್ಲಿ ಈಗ ಸಾಕಷ್ಟು ಕೆಲಸ ಇದೆ. ನನ್ನ ಉದ್ಯೋಗದಾತನಾದ ನನ್ನ 'ಬಾಸ್' ನನ್ನನ್ನು ಯಾವ ಗಳಿಗೆಯಲ್ಲಿಯೂ ದೂರಕ್ಕೆ ಕಳುಹಿಸಲು ಅಥವಾ ನನ್ನನ್ನು ಬಿಟ್ಟಿರಲು ಸಿದ್ಧರಿಲ್ಲ, ಆದ್ದರಿಂದ ಅವರು ಕರೆದಾಗಲೆಲ್ಲಾ ಅವರೊಂದಿಗೆ ಇರಬೇಕು. ಅವರೊಂದಿಗೆ ಪ್ರಯಾಣಕ್ಕೆ ಸಿದ್ಧನಿರಬೇಕು. ಹಾಗಾಗಿ ಸಮಯವೇ ಸಿಗುತ್ತಿಲ್ಲ, ಅಲ್ಲದೆ ಯಾವುದೇ Entertainment ಗೆ ಅವಕಾಶವಿಲ್ಲ ವೆಂದು ತನ್ನ ದುಃಖವನ್ನು ತೋಡಿಕೊಂಡ.

ಆಗ ನಾವು ಅವನಿಗೆ ''ನೋಡಪ್ಪ ನಿನ್ನಲ್ಲಿ ಪ್ರತಿಭೆ ಇದೆ. ಸಾಧಿಸುವ ಛಲವಿದೆ. ಆ ಇನ್ನೊಬ್ಬನಿಗಾಗಿ ನೀನೇಕೆ ನಿನ್ನನ್ನು ನೀನು ಅರ್ಪಿಸಿಕೊಳ್ಳುವೆ? **ಅದಕ್ಕಿಂತಲೂ ನೀನೇ ಆ 'ಬಾಸ್'** ಆದರೆ ನಿನ್ನತನವನ್ನು ನೀನು ಉಳಿಸಿ ಕೊಳ್ಳಬಹುದಲ್ಲವೇ?'' ಎಂದು ಹೇಳಿದೆವು.

ಮತ್ತೆ 5 ವರ್ಷದ ನಂತರ ಒಂದು ದಿನ ಅವನು ಶಾಲೆಗೆ ಬಂದು 'ಸರ್' ನೀವಂದಂತೆ ಈಗ ನಾನೇ 'ಬಾಸ್' ಆಗಿದ್ದೇನೆ. ನಾನೇ ಬಂದು ಕಂಪನಿ ಪ್ರಾರಂಭಿಸಿದ್ದೇನೆ. ನನ್ನ ಕೈಕೆಳಗೆ ನೂರಾರು ಮಂದಿ ಕೆಲಸಗಾರರು ಇದ್ದಾರೆ. ನನ್ನ ಸಮಯವನ್ನು ನಾನು ಒಳ್ಳೆಯ ರೀತಿಯಲ್ಲಿ ಕಳೆಯುತ್ತಿದ್ದೇನೆ. ಈಗ Entertainment ಗೂ ಸಾಕಷ್ಟು ಅವಕಾಶವಿದೆ. ಇನ್ನು ಆಗಾಗ ಶಾಲೆಗೆ ಭೇಟಿ ನೀಡುತ್ತೇನೆ ಎಂದು ಹೇಳಿ ಶಾಲೆ ಅಭಿವೃದ್ಧಿ ನಿಧಿಗೆ ಸಾಕಷ್ಟು ದೊಡ್ಡ ಮೊತ್ತದ ಕೊಡುಗೆ ನೀಡಿ ಶಾಲೆಯಿಂದ ನಿರ್ಗಮಿಸಿದ.

ಹೀಗೆ ನಾವು ಇದ್ದಷ್ಟು ಸಮಯವೂ ಕೆಲಸಗಾರರಾಗಿರುವುದಕ್ಕಿಂತಲೂ ನಾವೇ 'ಬಾಸ್' ಆಗಿರುವಂತೆ ಪ್ರಯತ್ನಿಸುವುದು ಲೇಸಲ್ಲವೇ? ಈ ಬಗ್ಗೆ ಪ್ರತಿಯೊಬ್ಬರೂ ಯೋಚಿಸಬೇಕಲ್ಲವೆ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಆಗ ಜರಾಪುತ್ರನು (ಜರಾಸಂಧನು) ಮಧು ವಂಶೀಯರಾದ ರಾಮಕೃಷ್ಣರನ್ನು ಸೂರ್ಯನನ್ನು ಮೋಡಗಳು ಮುಚ್ಚುವಂತೆ ತನ್ನ ಮಹಾಸೈನ್ಯದಿಂದ ಮುತ್ತಿದನು. ಅವರೂ, ಅವರ ಸೈನ್ಯವೂ ಕಾಣದಂತಾದವು. ಈ ಯುದ್ಧವನ್ನು ನೋಡಲು ಪಟ್ಟಣದ ಎತ್ತರದ ಮಹಡಿಗಳನ್ನೇರಿ ನಿಂತಿದ್ದ ಪುರಸ್ತ್ರೀಯರು ಈ ಅವಸ್ಥೆಯನ್ನು ಕಂಡು ದುಃಖದಿಂದ ಮೂರ್ಛೆ ಹೋದರು. ಶ್ರೀ ಕೃಷ್ಣನು ತನ್ನ ಸೈನ್ಯವು ಶತ್ರುಗಳ ಶರವರ್ಷದಿಂದ ಘಾಸಿ ಪಡುತ್ತಿರುವುದನ್ನು ನೋಡಿ ತನ್ನ ಉತ್ತಮ ಧನುಸ್ಸಾದ ಶಾರ್ಙ್ಗವನ್ನು ಎತ್ತಿ ಹಿಡಿದು ಜಂಕಾರನಾದವನ್ನು ಮಾಡಿದನು. ಮತ್ತೆ ಬತ್ತಳಿಕೆಯಿಂದ ಬಾಣಗಳನ್ನು ತೆಗೆದು ಬಿಲ್ಲಿಗೆ ಹೂಡಿ ಹೂಡಿ ಬಿಡಲಾರಂಭಿಸಿದನು. ಶತ್ರು ಸೈನ್ಯದ ರಥಗಳು, ಧ್ವಜಗಳು, ಕುದುರೆಗಳು, ಆನೆಗಳು, ಸೈನಿಕರೊಂದಿಗೆ ತೊಪ ತೊಪನೆ ಕೆಳಕ್ಕೆ ಬಿದ್ದವು. ರಣ ರಂಗದಲ್ಲಿ ರಕ್ತದ ಹೊಳೆ ಹರಿಯಿತು. ಯುದ್ಧಭೂಮಿಯು ಆನೆ, ಕುದುರೆ, ಸೈನಿಕರ ಹೆಣಗಳಿಂದ ಭೀಕರವಾಗಿ ಕಾಣಿಸಿತು. ಬಲರಾಮನೂ ತನ್ನ ಮುಸಲಾಯುಧದಿಂದ ಶತ್ರು ಸೇನೆಯನ್ನು ಪುಡಿಗಟ್ಟುತ್ತಿದ್ದನು. ಹೀಗೆ ಜರಾಸಂಧನ ಸೈನ್ಯ ನಿಶ್ಶೇಷವಾಗಿ ನಾಶವಾಯಿತು. ಮುರಿದು ಹೋದ ರಥವುಳ್ಳ ಜರಾಸಂಧನನ್ನು ಹಿಡಿದು ಬಲರಾಮನು ಮಾನುಷ ಮತ್ತು ವಾರುಣ ಪಾಶಗಳಿಂದ ಬಂಧಿಸಲು ಹೊರಟಾಗ ಕೃಷ್ಣನು ಅವನನ್ನು ತಡೆದನು. ರಾಮ, ಕೃಷ್ಣರಿಂದ ಮುಕ್ತನಾದ ಜರಾಸಂಧನಿಗೆ ಅತಿಯಾದ ಲಜ್ಜೆಯಾಯಿತು. ಅವನು ತಪಸ್ಸು ಮಾಡುವ ಸಂಕಲ್ಪ ಮಾಡಿದನು. ಆದರೆ ಅವನ ಮಿತ್ರ ರಾಜರು ಅವನನ್ನು ಸಮಾಧಾನ ಪಡಿಸಿದರು. ''ಮಹಾವೀರ, ಈ ಪರಾಜಯ ಪೂರ್ವಕರ್ಮದ ಫಲ. ನಿನ್ನ ಪರಾಕ್ರಮದ ಮುಂದೆ ಈ ಯಾದವರು ಯಾವ ಲೆಕ್ಕ? ಇನ್ನೊಮ್ಮೆ ದೊಡ್ಡ ಸೈನ್ಯದೊಡನೆ ಬಂದು ಯುದ್ಧ ಮಾಡಿ ಯಾದವರನ್ನು ನಾಮಾವಶೇಷಗೊಳಿಸು''.

ಮಾಗಧನು ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ತನ್ನ ದೇಶಕ್ಕೆ ಹೊರಟು ಹೋದನು. ರಾಮ, ಕೃಷ್ಣರು ಶತ್ರುಗಳ ಆಭರಣಾದಿ ಸಂಪತ್ತನ್ನು ತಂದು ರಾಜನಾದ ಉಗ್ರಸೇನನಿಗೆ ಒಪ್ಪಿಸಿದರು.

ಜರಾಸಂಧನು ಹದಿನೇಳು ಸಲ ಇಪ್ಪತ್ತಮೂರು ಇಪ್ಪತ್ತಮೂರು ಅಕ್ಷೌಹಿಣಿ ಸೈನ್ಯದೊಡನೆ ಯುದ್ಧಕ್ಕೆ ಬಂದು ಮೊದಲಿನಂತೆ ಸೋತು ಹೋದನು. ಹದಿನೆಂಟನೆಯ ಸಲ ಯುದ್ಧಕ್ಕೆ ಹೊರಡುವಾಗ ನಾರದರು ಕಾಲಯವನನನ್ನು ಪ್ರಚೋದಿಸಿ ಯಾದವರ ವಿರುದ್ಧ ಯುದ್ಧ ಮಾಡಲು ಕಳುಹಿಸಿದರು. ಅವನು ಮೂರು ಕೋಟಿ ಮ್ಲೇಚ್ಛರ ಸೈನ್ಯದೊಡನೆ ವೃಷ್ಣಿವಂಶೀಯರು ತನಗೆ ಸಮಸಮರೆಂದು ಕೊಂಡು ಮಥುರೆಗೆ ಬಂದನು. ಈಗ ಎರಡು ಆಪತ್ತುಗಳು ಒಟ್ಟಿಗೇ ಎರಗಿದ್ದವು. ಶ್ರೀಕೃಷ್ಣನು ಚಿಂತಾಕ್ರಾಂತನಾದನು. ''ಯವನನು ಆಗಲೇ ಯುದ್ಧಕ್ಕೆ ಬಂದಾಯಿತು. ಜರಾಸಂಧನು ಇಂದೋ ನಾಳೆಯೋ ಬರಲಿರುವನು. ನಾವು ಯವನನ ಜೊತೆಯಲ್ಲಿ ಹೋರಾಡುವಾಗ ಜರಾಸಂಧನು ಬಂದು ಯಾದವರನ್ನು ಸಂಹರಿಸುವನು ಅಥವಾ ನಗರವನ್ನು ಮುತ್ತಿಬಿಡಬಹುದು. ಆದುದರಿಂದ ಈಗಲೇ ಮನುಷ್ಯರಿಂದ ಪ್ರವೇಶಿಸಲಾಗದ ಒಂದು ಕೋಟೆಯನ್ನು ನಿರ್ಮಿಸಿಬಿಡಬೇಕು. ಅಲ್ಲಿ ಬಂಧುಗಳನ್ನೂ, ಇತರ ಯಾದವರನ್ನೂ ಸುರಕ್ಷಿತವಾಗಿ ಇರಿಸಬೇಕು. ಆಗ ನಾವು ಯವನರೊಡನೆ ನಿಶ್ಚಿಂತೆಯಿಂದ ಯುದ್ಧ ಮಾಡಬಹುದು'' ಎಂದು ಬಲರಾಮನಿಗೆ ಹೇಳಿದನು. ಅನಂತರ ತನ್ನ ಯೋಗಮಾಯೆಯ ಬಲದಿಂದ ಸಮುದ್ರದಲ್ಲಿ ದುರ್ಗಮವಾದ, ದುರ್ಭೇದವಾದ ಹನ್ನೆರಡು ಯೋಜನ ವಿಸ್ತೀರ್ಣವಾದ ದುರ್ಗವನ್ನು ನಿರ್ಮಿಸಿದನು. ಅದೊಂದು ದೊಡ್ಡ ಪಟ್ಟಣವೇ ಆಗಿತ್ತು. ಅಲ್ಲಿ ಎಲ್ಲ ವಿಧದ ಸೌಕರ್ಯಗಳೂ ಇದ್ದವು. ವಾಸ್ತುಶಿಲ್ಪದ ಮನೆಗಳು, ಅರಮನೆಗಳು, ಅರಣ್ಯಗಳು, ಉಪವನಗಳು ಅಲ್ಲಿದ್ದವು. ಅಲ್ಲಿ ಯಾದವರನ್ನು ಸೇರಿಸಿ ಎಲ್ಲ ವರ್ಣದ ಜನರು ಹೋಗಿ ನೆಲೆನಿಂತರು. ದೇವೇಂದ್ರನು ದಿವ್ಯ ವೃಕ್ಷಗಳನ್ನೂ, ಮೃತ್ಯ ಧರ್ಮಕ್ಕೊಳಗಾಗದ ಸುಧರ್ಮ ಸಭೆಯನ್ನೂ ಆ ಪಟ್ಟಣಕ್ಕೆ ಕಳುಹಿಸಿಕೊಟ್ಟನು. ವರುಣನು ಒಂದು ಕಿವಿ ಕಪ್ಪಗಿರುವ ದಿವ್ಯವಾದ ಕುದುರೆಗಳನ್ನು ಕೊಟ್ಟನು. ಕುಬೇರನು ತನ್ನ ಎಂಟು ನಿಧಿಗಳನ್ನು ಒಪ್ಪಿಸಿದನು. ಲೋಕಪಾಲರು ತಾವು ಹಿಂದೆ ಭಗವಂತನಿಂದ ಪಡೆದ ಸಂಪತ್ತುಗಳನ್ನು ಅವನಿಗೇ ಹಿಂದಿರುಗಿಸಿದರು. ಈ ಸುಂದರ ಸಂಪತ್ಸಮೃದ್ಧವಾದ ನಗರದ ಹೆಸರು ದ್ವಾರಕಾ ಎಂದಾಗಿತ್ತು. ಅಲ್ಲಿ ತನ್ನ ಜನರನ್ನು ಬಲರಾಮನ ರಕ್ಷಣೆಯಲ್ಲಿರಿಸಿ ತಾನು ನಿರಾಯುಧವಾಗಿ ಮಥುರಾ ಪಟ್ಟಣದಿಂದ ಹೊರಗೆ ನಡೆದನು.

ಅವನನ್ನು ನೋಡಿದ ಕಾಲಯವನನು ನಾರದರು ಹೇಳಿದಂತೆ ಶರೀರ ಲಕ್ಷಣ, ವೇಷ ಭೂಷಣಗಳಿಂದ ಅವನೇ ಕೃಷ್ಣನೆಂದು ಗುರುತಿಸಿದರು. ಅವನು ನಿರಾಯುಧನಾಗಿ ಬರುತ್ತಿದ್ದುದರಿಂದ ತಾನೂ ನಿರಾಯುಧನಾಗಿ ಯುದ್ಧ ಮಾಡಲು ನಿಶ್ಚಯಿಸಿದನು. ಆದರೆ ಅವನು ತನಗೆ ಬೆನ್ನು ಹಾಕಿ ಓಡುತ್ತಿದ್ದುದರಿಂದ ಯೋಗಿಗಳಿಗೂ ದುರ್ಲಭನಾದ ಶ್ರೀಕೃಷ್ಣನನ್ನು ಹಿಡಿಯಲು ತಾನೂ ಅವನ ಹಿಂದಿನಿಂದ ಓಡಿದನು. ಆಗ ಅವನು ''ಯದುಕುಲದಲ್ಲಿ ಹುಟ್ಟಿದ ನಿನಗೆ ಈ ರೀತಿ ರಣಹೇಡಿಯಾಗಿ ಓಡಿ ಹೋಗುವುದು ಉಚಿತವಲ್ಲ'' ಎಂದು ಆಕ್ಷೇಪಿಸುತ್ತಿದ್ದನು. ಕೃಷ್ಣನು ಓಡಿ ಒಂದು ಪರ್ವತಗುಹೆಯೊಳಗೆ ಪ್ರವೇಶಿಸಿದನು. ಕಾಲಯವನನೂ ಆ ಗುಹೆಯ ಒಳ ಹೊಕ್ಕನು. ಅಲ್ಲಿ ಮಲಗಿರುವ ಇನ್ನೊಬ್ಬ ಮನುಷ್ಯನನ್ನು ಕಂಡನು. ಓಡಿ ಬಂದ ಶ್ರೀಕೃಷ್ಣನೇ ದೊಡ್ಡ ಸಾಧುವಿನಂತೆ ಮಲಗಿದ್ದಾನೆಂದು ಭಾವಿಸಿದ ಆ ಮೂಢನು ಅವನಿಗೆ ಕಾಲಿನಿಂದ ಒದೆದನು. ಆ ಮಲಗಿದ್ದ ಮನುಷ್ಯನು ಎಚ್ಚತ್ತು ಕಣ್ತೆರೆದು ಎಲ್ಲ ಕಡೆ ನೋಡಿದನು. ಆಗ ಪಕ್ಕದಲ್ಲಿ ಯವನನು ಕಾಣಿಸಿದನು. ಅವನು ಸಿಟ್ಟಿನಿಂದ ಯವನನನ್ನು ನೋಡಿದನು. ಆ ನೋಟ ಅವನ ಮೇಲೆ ಬೀಳುತ್ತಲೇ ಅವನ ಮೈಯಿಂದ ಒಂದು ಭಯಂಕರ ಬೆಂಕಿ ಹೊರಟು ಯವನನನ್ನು ಸುಟ್ಟು ಬೂದಿ ಮಾಡಿತು.

ಗುಹೆಯಲ್ಲಿ ಮಲಗಿದ್ದವನು ಮುಚುಕುಂದನು. ಅವನು ಇಕ್ಷ್ವಾಕು ವಂಶದ ಮಾಂಧಾತನ ಮಗನು. ಅವನು ಎಷ್ಟು ಪ್ರಭಾವಶಾಲಿಯಾದ ರಾಜನಾಗಿದ್ದನೆಂದರೆ ದೇವತೆಗಳೂ ಅವನ ಸಹಾಯ ಪಡೆದುಕೊಳ್ಳುತ್ತಿದ್ದರು. ಒಮ್ಮೆ ದೇವತೆಗಳಿಗೆ ರಾಕ್ಷಸರಿಂದ ಭಯವುಂಟಾಯಿತು. ಅವರು ಮುಚುಕುಂದನ ಸಹಾಯವನ್ನು ಯಾಚಿಸಿದರು. ಹಾಗೆ ದೇವಲೋಕಕ್ಕೆ ಹೋದ ಮುಚುಕುಂದನು ಬಹಳ ಕಾಲ ಅಲ್ಲೇ ಉಳಿಯಬೇಕಾಯಿತು. ಅಷ್ಟರಲ್ಲಿ ಶಿವಪುತ್ರನಾದ ಕುಮಾರಸ್ವಾಮಿಯು ದೇವತೆಗಳಿಗೆ ರಕ್ಷಕನಾಗಿ ಬಂದುದರಿಂದ ಅವರು ಮುಚುಕುಂದನಿಗೆ ವಿಶ್ರಾಂತಿ ಪಡೆಯಲು ಕೇಳಿಕೊಂಡರು. ಇದರ ಮಧ್ಯದಲ್ಲಿ ಮನುಷ್ಯಲೋಕದಲ್ಲಿದ್ದ ಅವನ ಪತ್ನೀ, ಪುತ್ರರು, ವಯಃ ಸಹಜವಾಗಿ ಕಾಲವಾಗಿದ್ದರು. ಇದರಿಂದ ವೈರಾಗ್ಯ ಹೊಂದಿದ ಮುಚುಕುಂದನಿಗೆ ಬಹಳ ಕಾಲ ನಿದ್ರಿಸಿ ದಣಿವಾರಿಸಿಕೊಳ್ಳಬೇಕೆಂದೆನಿಸಿತು. (ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು ।
ಸರ್ವಸ್ಸದ್ಬುದ್ಧಿಮಾಪ್ನೋತು ಸರ್ವಸ್ಸರ್ವತ್ರ ನಂದತು ॥

ಅಂದರೆ ಎಲ್ಲರೂ ಕಷ್ಟಗಳಿಂದ ಪಾರಾಗಲಿ. ಎಲ್ಲರೂ ಶುಭವಾದುದನ್ನೇ ನೋಡುವಂತಾಗಲಿ. ಎಲ್ಲರಿಗೂ ಸದ್ಬುದ್ಧಿ ಬರಲಿ. ಎಲ್ಲರೂ ಎಲ್ಲೆಡೆಗಳಲ್ಲೂ ಆನಂದದಿಂದಿರಲಿ.

**ಪುಸ್ತಕ ಪರಿಚಯ :**

**''ಹನಿಸೋನೆ''**

*ಲೇಖಕರು :* ಮಾರ್ಪಳ್ಳಿ ಆರ್. ಮಂಜುನಾಥ್

*ಪ್ರಕಾಶರು :* ಶ್ರೀಮತಿ ಮಂಜುಳಾ ಮಂಜುನಾಥ್, ಶಿವಮೊಗ್ಗ

*ಮುದ್ರಕರು :* ಜೋಯ್ಸ್ ಬುಕ್ ಹೌಸ್ ಮತ್ತು ಪ್ರಿಂಟರ್ಸ್, ಶಿವಮೊಗ್ಗ

ಶ್ರೀ ಮಾರ್ಪಳ್ಳಿ ಆರ್. ಮಂಜುನಾಥರ ಸಾಹಿತ್ಯರಚನೆ, ಸಾಹಿತ್ಯ ಆಸಕ್ತಿ, ಕಛೇರಿಯ ಕೆಲಸದಲ್ಲಿನ ಶ್ರದ್ಧೆ ಉತ್ಸಾಹಗಳನ್ನು ಗಮನಿಸಿದ್ದೇನೆ. ಸದಾ ಚಟುವಟಿಕೆಯ ಕೇಂದ್ರಬಿಂದುವಾಗಿರುವ ಇವರ ಕಾರ್ಯ ವೈಖರಿ ಮೆಚ್ಚುವಂತಾದ್ದು.

ಶ್ರೀಯುತರ ಹದಿನೆಂಟನೇ ಕೃತಿ ಹನಿ ಸೋನೆ ಬದುಕಿನ ನಾನಾ ಮುಖಗಳನ್ನು ಪರಿಚಯಿಸಿ ಪ್ರೀತಿ, ಪ್ರೇಮಗಳನ್ನು, ಪರಿಸರವನ್ನು, ಗ್ರಾಹಕ ಜಾಗೃತಿಯನ್ನು, ಹಿತವಚನವನ್ನು ಒಳಗೊಂಡು ಓದುಗರನ್ನು ಆಕರ್ಷಿಸುತ್ತದೆ. ಕೆಲವೇ ಸಾಲುಗಳಲ್ಲಿ-ಹಿರಿದಾದ ಅರ್ಥವನ್ನು ಕೂಡಲೇ ಅರ್ಥೈಸುವ ಹನಿಗವನ ಇಂದಿಗೂ ಪ್ರಸ್ತುತ ಎಂದು ಶಿವಮೊಗ್ಗ ಜಿಲ್ಲಾಧಿಕಾರಿಗಳಾದ ವಿ.ಪೊನ್ನುರಾಜ್ ಈ ಕೃತಿಯ 'ಶುಭ ನುಡಿ'ಯಲ್ಲಿ ತಿಳಿಸುತ್ತಾರೆ.

ಸೋನೆ ಅನ್ನುವ ಶಬ್ದವೇ ಅರ್ಥಪೂರ್ಣ ಅನಿಸುತ್ತದೆ ನನಗೆ. ಸೋನೆ ಅಂದರೆ ಅದು ಜಡಿ ಮಳೆ ಅಲ್ಲ, ಅಬ್ಬರಿಸಿ ಸುರಿವ ಮಳೆಯೂ ಅಲ್ಲ, ಪಿರಿಪಿರಿ ಮಳೆಯೂ ಅಲ್ಲ, ಹನಿಹನಿಯಾಗಿ ಗಾಳಿಯೊಡನೆ ತೇಲುತ್ತ, ಒಂದು ದಿಕ್ಕು ದಿಸೆ ಇಲ್ಲದೆ, ಕೊಡೆ ಹಿಡಿಯಲಾಗದೆ, ಬಾಗಿ ಬಳುಕಿ, ಒಂದೇ ಸಮನೆ ಬೀಳುವ ಜಿಬಿರು ಮಳೆ ಈ ಸೋನೆ ಮಳೆ. ಇಲ್ಲಿ ಕವನಗಳು ಕೂಡ ಹಾಗೆಯೇ, ಬದುಕಿನ ನೂರಾರು ವಿಷಯಗಳನ್ನು ಹನಿಯ ರೂಪದಲ್ಲಿ ನಮ್ಮ ಮುಂದೆ ಇಡುತ್ತಾ ಹೋಗುತ್ತಾರೆ ಮಂಜುನಾಥ್. ಅದು ಪ್ರಕೃತಿಯ ವೈವಿಧ್ಯತೆ ಇರಬಹುದು, ಬದುಕಿನ ಒಂದು ವಸ್ತುಸ್ಥಿತಿ ಇರಬಹುದು, ದೇಹ ಮನಸ್ಸಿಗೆ ಸಂಬಂಧಪಟ್ಟ ವ್ಯಾಪಾರ ಇರಬಹುದು, ನಿತ್ಯದ ಜಂಜಡದಲ್ಲಿ ಸಿಲುಕಿದ ಮನುಷ್ಯನ ಗತಿ ಇರಬಹುದು ಎಲ್ಲವನ್ನೂ ಕವನದ ಮೂಲಕ ನಮ್ಮ ಮುಂದೆ ಇಡುತ್ತಾರೆ ಕವಿ ಎಂದು ಈ ಕೃತಿಯಲ್ಲಿ ಡಾ. ನಾ.ಡಿಸೋಜ 'ಹನಿಸೋನೆಗೊಂದು ಸೇಸೆ' ಯಲ್ಲಿ ತಿಳಿಸುತ್ತಾರೆ.

ಈ ಕೃತಿಯಲ್ಲಿ ಈ ಕವನವನ್ನು ಓದಿ -

ಶುಗರ್ ಪೇಷಂಟ್ :


ಸಕ್ಕರೆ ದರ
ಏರಿದಷ್ಟು
ನನಗೇನು
ಚಿಂತೆ ಇಲ್ಲ
ಏಕೆಂದರೆ
ನಾನು
ಶುಗರ್ ಪೇಷಂಟ್

ಸಾಹಿತ್ಯ ಅನ್ನೋದು ಒಂದು ತಪಸ್ಸು, ಹಗಲು-ರಾತ್ರಿ, ಓದು-ಬರಿ. ಅದುವೆ ಸಾಹಿತ್ಯ ದೇವಿಗೆ ಹವಿಸ್ಸು ಎಂದು ನಮಿಸುವ ಮಾರ್ಪಳ್ಳಿ ಆರ್. ಮಂಜುನಾಥ್ ಇವರು ಜಿಲ್ಲೆಯ ಏಳನೇ ಸಾಹಿತ್ಯ ಸಮ್ಮೇಳನದ ಸಂಭ್ರಮದಲ್ಲಿ ಸಾಹಿತ್ಯ ದೇವಿಗೆ 'ಹನಿಸೋನೆ'ಯನ್ನು ಸಮರ್ಪಿಸಿದ್ದಾರೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಪಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎಸ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಕೆ. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್.

# ಕಡಬ ಕುಂಭಾಟ್ ಗೋಪಾಲರಾವ್ ಇವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ



ನವಂಬರ್ 20ರಂದು ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದ ಕನ್ನಡ ಭವನದಲ್ಲಿ ಜರಗಿದ 'ಕರ್ನಾಟಕ ಸಾಂಸ್ಕೃತಿಕ ವೈಭವ' ಕಾರ್ಯಕ್ರಮದಲ್ಲಿ ರಾಜ್ಯಾದ್ಯಂತ 52 ಸಾಧಕರನ್ನು ಗುರುತಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಈಗಾಗಲೇ ಶಿಕ್ಷಣ, ಸಾಹಿತ್ಯ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಹಲವಾರು ಪ್ರಶಸ್ತಿ, ಸನ್ಮಾನ ಪಡೆದ ಕವಿ, ಲೇಖಕರಾದ ನಿವೃತ್ತ ಶಿಕ್ಷಕ ಕಡಬ ಕುಂಭಾಟ್ ಗೋಪಾಲರಾವ್ ಬಿಳಿನೆಲೆ ಈ ಪ್ರಶಸ್ತಿಗೆ ಆಯ್ಕೆಗೊಂಡಿದ್ದು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದಿರುತ್ತಾರೆ.

ಶಿಕ್ಷಣ ಕ್ಷೇತ್ರದಲ್ಲಿ ಸರಕಾರದಿಂದ ತಾಲೂಕು, ಜಿಲ್ಲಾ ಮಟ್ಟದಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿಯನ್ನೂ ಹುಬ್ಬಳ್ಳಿಯ ಖಾಸಗಿ ಸಂಸ್ಥೆಯೊಂದರಿಂದ ರಾಜ್ಯ ಮಟ್ಟದಲ್ಲಿ ಆದರ್ಶ ಶಿಕ್ಷಕ ಪ್ರಶಸ್ತಿ ಪಡೆದಿರುತ್ತಾರೆ.

ಸಾಹಿತ್ಯ ಸೇವೆಗೆ ಪುತ್ತೂರು ತಾಲೂಕು ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನಿಸಲ್ಪಟ್ಟಿದ್ದಾರೆ. ಧಾರ್ಮಿಕ ಸೇವೆಯಲ್ಲಿ - ಪಾಳು ಬಿದ್ದ ಕೆಲವು ದೇವಾಲಯಗಳನ್ನು ಊರವರನ್ನು ಸಂಘಟಿಸಿ ಜೀರ್ಣೋದ್ಧಾರಗೊಳಿಸಿ ಬ್ರಹ್ಮಕಲಶ ನೆರವೇರಿಸಿದ್ದು ಶೃಂಗೇರಿ ಜಗದ್ಗುರು ಸುಬ್ರಹ್ಮಣ್ಯ ಮಠದ ಶ್ರೀ ಶ್ರೀ ಸ್ವಾಮೀಜಿ, ರಾಮಚಂದ್ರಾಪುರ ಮಠದ ಶ್ರೀ ಶ್ರೀ ಸ್ವಾಮೀಜಿ, ಎಡನೀರು ಮಠದ ಶ್ರೀ ಶ್ರೀ ಸ್ವಾಮೀಜಿಯವರಿಂದ ಸನ್ಮಾನಿಸಲ್ಪಟ್ಟಿದ್ದಾರೆ ಹಾಗೂ ಕೋಟೆಕಾರು ಶಂಕರ ಪ್ರತಿಷ್ಠಾನದಿಂದಲೂ ಸನ್ಮಾನಿತರಾಗಿದ್ದಾರೆ.

ಇವರ ಧಾರ್ಮಿಕ ಸೇವೆಗೆ 2009ರಲ್ಲಿ ರಾಷ್ಟ್ರಪ್ರಶಸ್ತಿ ಸಿಕ್ಕಿದ್ದು ಈ ಕಾರ್ಯಕ್ರಮ ಧಾರವಾಡದಲ್ಲಿ ನಡೆದಿತ್ತು.

ಶಿಕ್ಷಕರಾಗಿ ಪ್ರಕೃತ ನಿವೃತ್ತರಾಗಿದ್ದರೂ ಕಡಬ ಶ್ರೀ ಶ್ರೀಕಂಠಸ್ವಾಮಿ, ಮಹಾಗಣಪತಿ ದೇವಸ್ಥಾನದ ಆಡಳಿತ ಮೊಕ್ತೇಸರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.



ಕರ್ನಾಟಕ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ। ನಲ್ಲೂರು ಪ್ರಸಾದ್ ಮತ್ತು ಪ್ರಸಿದ್ಧ ಸಾಹಿತಿ ಡಾ। ನಿಟ್ಟೂರು ಶಾಂತರಾಮ ಪ್ರಭು ಇವರು ಕೆ. ಗೋಪಾಲರಾವ್ ಕಡಬ-ಬಿಳಿನೆಲೆ ಇವರನ್ನು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು.

# ಶ್ರೀ ಮಾರ್ಪಳ್ಳಿ ಆರ್. ಮಂಜುನಾಥ್ ಶಿವಮೊಗ್ಗ ಇವರು ಬರೆದ 18ನೇ ಕೃತಿ ಹನಿಸೋನೆ (ಹನಿಗವನಗಳ ಸಂಕಲನ) ಬಿಡುಗಡೆ ಸಮಾರಂಭ



ತಾ.8-3-2011ರಂದು ಶಿವಮೊಗ್ಗನಗರದ ದುರ್ಗಿ ಗುಡಿಯಲ್ಲಿ ಇರುವ ಸೂರ್ಯ ಕಂಫರ್ಟ್ಸ್‌ನಲ್ಲಿ ಬೆಳಿಗ್ಗೆ 10-30ಕ್ಕೆ ಸರಿಯಾಗಿ ಶ್ರೀ ಮಾರ್ಪಳ್ಳಿ ಆರ್. ಮಂಜುನಾಥ್ ಇವರು ಬರೆದ ಹನಿಗವನ ಸಂಕಲನದ ಪುಸ್ತಕ ಬಿಡುಗಡೆಯ ಕಾರ್ಯಕ್ರಮ ಜರುಗಿತು. ಶ್ರೀಮತಿ ಗಿರಿಜ ಸತ್ಯನಾರಾಯಣ್ ಇವರಿಂದ ಗಣಪತಿಯ ಪ್ರಾರ್ಥನೆ ನಡೆಯಿತು. ಶ್ರೀ ಮಾರ್ಪಳ್ಳಿ ಪ್ರಸಾದ್, ಉಪನ್ಯಾಸಕರು BIET ದಾವಣಗೆರೆ ಇವರು ಅತಿಥಿಗಳನ್ನು ಗಣ್ಯರನ್ನು ಸ್ವಾಗತಿಸಿದರು. ಶ್ರೀ ಮಾರ್ಪಳ್ಳಿ ಆರ್.ಮಂಜುನಾಥ್ ಲೇಖಕರು ಇವರು ತಮ್ಮ ಅನಿಸಿಕೆಗಳನ್ನು ಕವನದ ರೂಪದಲ್ಲಿ ಸಭಿಕರೊಂದಿಗೆ ಹಂಚಿ ಕೊಂಡರು.

ಹನಿಸೋನೆ ಪುಸ್ತಕವನ್ನು ಬಿಡುಗಡೆ ಮಾಡಿದ ಶ್ರೀ ವಿ. ಪೊನ್ನುರಾಜ್, ಭಾ.ಆ.ಸೇ. ಜಿಲ್ಲಾಧಿಕಾರಿಗಳು ಶಿವಮೊಗ್ಗ ಇವರು ಕೃತಿಯ ಬಗ್ಗೆ ಮತ್ತು ಕವಿಗಳ ಬಗ್ಗೆ ಮೆಚ್ಚುಗೆಗಳನ್ನು ವ್ಯಕ್ತಪಡಿಸಿ ಇಂದು ಸರ್ಕಾರಿ ನೌಕರ್ರು ಎಂದರೆ ಮಿಷನರಿ ಎಂದು ಸಾಹಿತಿಗಳು ವಿಮರ್ಶಕರು ಈ ಪದವನ್ನು ಬಳಸುತ್ತಾರೆ. ಆದರೆ ಸರ್ಕಾರಿ ನೌಕರರಿಗೂ ಭಾವನೆ ಇದೆ, ಕಾವ್ಯ ಶಕ್ತಿ ಇದೆ ಎನ್ನುವುದನ್ನು ಮಂಜುನಾಥ್‌ರಂತಹ ಸರ್ಕಾರಿ ಅಧಿಕಾರಿಗಳು ಕಾವ್ಯರಚನೆ ಮಾಡಿ ತೋರಿಸಿದ್ದಾರೆ ಎಂದು ತಿಳಿಸಿ ಇದು ಹೆಮ್ಮೆಯ ವಿಚಾರ ಎಂದು ಪ್ರಶಂಸಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶ್ರೀ ಸಿ.ಶ್ರೀಧರ್ ಉಪನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಶಿವಮೊಗ್ಗ, ಟಿ.ಆರ್. ಅಶ್ವತ್ಥನಾರಾಯಣ ಶೆಟ್ಟಿ, ಅಧ್ಯಕ್ಷರು ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಘ, ಶಿವಮೊಗ್ಗ ಮತ್ತು ಬಿ.ಕೆ. ಸುಬ್ರಹ್ಮಣ್ಯ, ಸೀನಿಯರ್ ಮ್ಯಾನೇಜರ್ ಆಪರೇಷನ್ಸ್ ಶಿವಮೊಗ್ಗ ಇವರು ಕವಿಗಳ ಬಗ್ಗೆ ಮತ್ತು ಕೃತಿಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ ನಾಡಿನ ಪ್ರಸಿದ್ಧ ಸಾಹಿತಿಗಳಾದ ಡಾ। ನಾ.ಡಿಸೋಜ ಇವರು ಮಕ್ಕಳ ಸಾಹಿತ್ಯದಿಂದ ಹನಿಗವನದ ಪ್ರಕಾರಕ್ಕೆ ಇಳಿದು ಹನಿಗವನ ರಚನೆ ಮಾಡಿದ ಶ್ರೀ ಮಾರ್ಪಳ್ಳಿ ಆರ್. ಮಂಜುನಾಥ್ ಇವರು ಅಭಿನಂದನೆಗೆ ಪಾತ್ರರೆಂದು, ಇಂದು ಚುಟುಕು ಹನಿಗವನಗಳು ಎಲ್ಲಾ ವರ್ಗದ ಓದುಗರರನ್ನು ಆಕರ್ಷಿಸುತ್ತದೆ ಎಂದು ತಿಳಿಸಿ ಮಂಜುನಾಥ್‌ರವರ ಈ ಹನಿಸೋನೆ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ಶುಭ ಹಾರೈಸಿದರು. ಶ್ರೀ ಮಾರ್ಪಳ್ಳಿ ಪ್ರವೋದ್ ಸಾಫ್ಟ್‌ವೇರ್ ಇಂಜಿಯರ್ ಇವರು ವಂದನಾರ್ಪಣೆಯನ್ನು ಸಲ್ಲಿಸಿದರು.

ವರದಿ : ಶ್ರೀಮತಿ ಮಂಜುಳಾ

# ಕುಂಜಿಬೆಟ್ಟು : ಕಿರುನವರಾತ್ರಿ ಆಚರಣೆ

ಶ್ರೀ ಶಾರದಾ ದೇವಸ್ಥಾನ, ಕುಂಜಿಬೆಟ್ಟು ಇಲ್ಲಿ ಸಮಾಜ ಬಾಂಧವರು ಹಾಗೂ ಪರಿಸರದ ಮಹಿಳೆಯರಿಂದ ಕಿರುನವರಾತ್ರಿ ಪ್ರಯುಕ್ತ ತಾ.4-4-2011ರಿಂದ 12-4-2011ರ ವರೆಗೆ ಸಂಜೆ 4 ಗಂಟೆಯಿಂದ 7ರ ವರೆಗೆ ಲಲಿತಾ ಸಹಸ್ರನಾಮ, ಭಜನೆ ಹಾಗೂ ರಾತ್ರಿ 7 ಗಂಟೆಗೆ ವಿಶೇಷ ಪೂಜೆಯೊಂದಿಗೆ ಕಿರುನವರಾತ್ರಿಯು ಆಚರಣೆಗೊಂಡಿತು.

# ಕಡಬ ತಲೇಕಿ : 24ನೇ ಪ್ರತಿಷ್ಠಾ ವಾರ್ಷಿಕೋತ್ಸವ

ಶ್ರೀ ಶ್ರೀ ಶೃಂಗೇರಿ ಪೀಠದ ಮಹಾ ಜಗದ್ಗುರುಗಳವರ ದಿವ್ಯ ಹಸ್ತದಿಂದ ಪುನಃ ಪ್ರತಿಷ್ಠಾಪಿಸಲ್ಪಟ್ಟ ಕಡಬ ತಲೇಕಿ ಶ್ರೀ ಶ್ರೀನಿವಾಸ ದೇವಸ್ಥಾನದ ಇಪ್ಪತ್ತ ನಾಲ್ಕನೇ ಪ್ರತಿಷ್ಠಾ ವಾರ್ಷಿಕೋತ್ಸವವು ತಾ.10-2-2011ನೇ ಗುರುವಾರ ಬ್ರಹ್ಮಶ್ರೀ ವಾಗೀಶ ತಂತ್ರಿಗಳ ನೇತೃತ್ವದಲ್ಲಿ ಸ್ವಸ್ತಿ ಶ್ರೀ ವಿಕೃತಿ ನಾಮ ಸಂವತ್ಸರದ ಮಾಘ ಮಾಸ ಶುಕ್ಲ ಪಕ್ಷ 27 ಸಲುವ ರಥ ಸಪ್ತಮಿ ದಿನ ವಿಜೃಂಭಣೆಯಿಂದ ಜರಗಿತು. ಇದು ನಮ್ಮ ಸಮಾಜದವರಿಂದಲೇ ಆಡಳಿತಕ್ಕೊಳಪಟ್ಟು ಮತ್ತು ನಮ್ಮ ಸಮಾಜದವರಿಂದಲೇ ಪೂಜಿಸಲ್ಪಡುವ ದೇವಾಲಯ.

ಅಂದು ಬೆಳಿಗ್ಗೆ ಹನ್ನೆರಡು ತೆಂಗಿನ ಕಾಯಿಗಳ ಮಹಾಗಣಪತಿ ಹವನ, ಶ್ರೀ ವಿಶ್ವನಾಥ ಸ್ವಾಮಿಗೆ ರುದ್ರಾಭಿಷೇಕ, ಪವಮಾನಾಭಿಷೇಕ, ನವಕಾಭಿಷೇಕ, ಶ್ರೀ ಶ್ರೀನಿವಾಸ ದೇವರಿಗೆ ಮತ್ತು ವಿಶ್ವನಾಥ ದೇವರಿಗೆ ಮಹಾ ಪೂಜೆ ಮತ್ತು ಪ್ರಸಾದ ಭೋಜನ ಅನ್ನಸಂತರ್ಪಣೆ ನೆರವೇರಿತು.

ಸಾಯಂಕಾಲ ಗಂಟೆ 6ರಿಂದ ಭಜನೆ ಹಾಗೂ ರಂಗಪೂಜೆ ನೆರವೇರಿತು. ಬಳಿಕ ಸ್ಥಳೀಯ ಮಕ್ಕಳಿಂದ ವಿವಿಧ ವಿನೋದಾವಳಿಗಳು, ನಮ್ಮ ಸಮಾಜದ ಹಲವು ಪುಟಾಣಿಗಳು ಮತ್ತು ಐಶ್ವರ್ಯ ಸತೀಶ್‌ರಾವ್, ಪ್ರೀತಿ ಹರ್ಷಕುಮಾರ್, ಭಾಗ್ಯಶ್ರೀ ಪ್ರಕಾಶ್ ಕಡಬ ಮುಂತಾದವರು ಭರತನಾಟ್ಯ ಸೇವೆ ನಡೆಸಿದರು. ರಾತ್ರಿ 9-30ರಿಂದ ಬೆಳಗ್ಗಿನ ವರೆಗೆ ಕೊಲ್ಲಂಗಾನ ಮೇಳದವರಿಂದ ''ಮಯಾ ಕಂಕಣ'' ಯಕ್ಷಗಾನ ಬಯಲಾಟ ಜರಗಿತು. ಈ ವಾರ್ಷಿಕೋತ್ಸವದ ಪ್ರಾಯೋಜಕರು ಶ್ರೀಮತಿ ಕನಕವಲ್ಲಿ ಮತ್ತು ಹರ್ಷಕುಮಾರ್ ಕೇದಿಗೆ ಪ್ರವೋದ್ ಆಟೋಮೊಬೈಲ್ಸ್ ಮಂಗಳೂರು ಇವರು.

ವರದಿ : ಪ್ರವೋದ್ ಕೇದಿಗೆ

# ಶ್ರೀ ಸುಬ್ರಹ್ಮಣ್ಯ ಸಭಾ (ರಿ.)-ಗುರುಗಳ ವರ್ಧಂತ್ಯುತ್ಸವ

**ಬಿಜೈ ಚರ್ಚ್ ರಸ್ತೆ, ಮಂಗಳೂರು - 3**

ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ತಾ.27-03-2011ರ ರವಿವಾರದಂದು ಸಭಾದಲ್ಲಿ ಶೃಂಗೇರಿ ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ವರ್ಧಂತ್ಯುತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಮುಂಜಾನೆ ಬ್ರಹ್ಮಶ್ರೀ ಪಾವಂಜೆ ಶ್ರೀ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ಏಕಾದಶ ರುದ್ರಾಭಿಷೇಕ, ಬಿಲ್ವ ಪತ್ರಾರ್ಚನೆ, ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಶತನಾಮಾವಳಿ ಹಾಗೂ ಲಲಿತ ಸಹಸ್ರನಾಮ ಸಾಮೂಹಿಕ ಪಾರಾಯಣ ನೆರವೇರಿತು. ತದನಂತರ ಶ್ರೀಯುತ ವಾಗೀಶ್ ಶಾಸ್ತ್ರಿಗಳು ತಮ್ಮ ಪ್ರವಚನದಲ್ಲಿ ಶೃಂಗೇರಿ ಶ್ರೀ ಗುರುಗಳು ತಮ್ಮ ಉದಾತ್ತ ಚಿಂತನೆಗಳ ಮೂಲಕ ಹೇಗೆ ವಿಶ್ವಮಾನ್ಯರಾಗಿದ್ದಾರೆಂದು ಮನ ಮುಟ್ಟುವಂತೆ ವಿವರಿಸಿದರು. ನಂತರ ಮಹಾ ಪೂಜೆ ನಡೆದು ಪ್ರಸಾದ ನೀಡಲಾಯಿತು. ಶ್ರೀಯುತ ಕರುಣ ರಾವ್ ಬೆಳ್ಳೆಯವರು ಸ್ವಾಗತಿಸಿದರೆ ಶ್ರೀಯುತ ಎನ್.ಕೆ. ಜಗನ್ನಿವಾಸ ರಾವ್‌ರವರು ವಂದನಾರ್ಪಣೆ ನೀಡಿದರು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸಾಂಪ್ರದಾಯಿಕ ಉಡುಗೆ ಧರಿಸಿ ಹಾಗೂ ಬಿಲ್ವ ಪತ್ರೆ, ತುಳಸಿ, ನಂದಿ ಬಟ್ಟಲು, ಅರ್ಕ ಇತ್ಯಾದಿ ಅರ್ಚನೆಗೆ ಬೇಕಾದ ಪತ್ರೆ ಪುಷ್ಪಗಳನ್ನು ತಂದು ಭಾಗವಹಿಸಿದರು.

ವರದಿ : ಶ್ರೀ ಪಿ.ಶ್ರೀಕಾಂತ ರಾವ್

# ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ-ಶಿವರಾತ್ರಿ ಆಚರಣೆ

ತಾ.02-03-2011ರಂದು ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ ಇದರ ವತಿಯಿಂದ ಶಿವರಾತ್ರಿ ಆಚರಣೆಯು ಶ್ರೀ ಶಶಿಧರ ರಾವ್ ಕೋಲ್ಪೆ ಹಾಗೂ ಸಹೋದರರ ಪ್ರಾಯೋಜಕತ್ವ ದಲ್ಲಿ ಜೋಗುಳಬೆಟ್ಟಿನ ಶ್ರೀರಾಮಧಾಮ ಧಾನ್ಯ ಮಂದಿರದಲ್ಲಿ ನಡೆಯಿತು. ವೇದಮೂರ್ತಿ ಶ್ರೀ ನಿರಂಜನಭಟ್ಟರ ಹಿರಿತನದಲ್ಲಿ ಶ್ರೀ ಶಶಿಧರ ರಾವ್ ಕೋಲ್ಪೆ, ಶ್ರೀ ಕೃತ್ತಿದಾಸ ಶರ್ಮ, ಶ್ರೀ ರತ್ನಾಕರ ರಾವ್ ಪರಪುರವರು ಏಕಾದಶ ರುದ್ರಾಭಿಷೇಕ ಪೂಜಾನಂತರ ಸೇರಿದ ಪ್ರತಿಷ್ಠಾನದ ಸದಸ್ಯರು ಮತ್ತು ಮಹಿಳಾ ಘಟಕದ ಸದಸ್ಯೆಯರು ರುದ್ರಾಷ್ಟಕ ಹಾಗೂ ರುದ್ರ ಸ್ತುತಿ ಪದ್ಯಗಳನ್ನು ಹಾಡಿದರು. ಕಾರ್ಯಕ್ರಮದ ಕೊನೆಯಲ್ಲಿ ಪ್ರಾಯೋಜಕರಿಂದ ಫಲಾಹಾರದ ವ್ಯವಸ್ಥೆ ಇತ್ತು.

## ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ

ನಂದಗೋಕುಲ, ಕಾರ್ಕಳ ರಸ್ತೆ, ಅಂಚೆ : ಪಡುಬಿದ್ರಿ

### ಮಹಾಸಭೆಯ ಅಧಿಸೂಚನೆ, ಶಂಕರ ಜಯಂತಿಯ ಆಮಂತ್ರಣ

ನಮ್ಮ ಸಂಘದ ಆಶ್ರಯದಲ್ಲಿ ತಾ.15-5-2011ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 10ಕ್ಕೆ ಸರಿಯಾಗಿ ಪಡುಬಿದ್ರಿ ಪ್ರಸನ್ನ ಪಾರ್ವತಿ ಬಾಲಗಣಪತಿ ದೇವಸ್ಥಾನದ ವಠಾರದಲ್ಲಿ ಪಡುಬಿದ್ರಿಯಲ್ಲಿ ಶಂಕರ ಜಯಂತಿಯ ಆಚರಣೆ ನಡೆಯಲಿರುವುದು.

ಆ ಬಳಿಕ ಸಂಘದ ಸರ್ವಸದಸ್ಯರ ಮಹಾಸಭೆಯು ಗಂಟೆ 11ಕ್ಕೆ ಸರಿಯಾಗಿ, ಸಂಘದ ಗೌರವಾಧ್ಯಕ್ಷರಾದ ಪಿ.ಬಿ.ವಾಸುದೇವ ರಾವ್ ಇವರ ಮಾರ್ಗದರ್ಶನದಲ್ಲಿ ಮತ್ತು ಅಧ್ಯಕ್ಷರಾದ ಎಂ.ಕೆ. ಮೋಹನರಾವ್ ಇವರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಅದೇ ಸಂದರ್ಭದಲ್ಲಿ ಸಂಘದ ವ್ಯಾಪ್ತಿಯಲ್ಲಿ ಬರುವ ಎಸ್.ಎಸ್.ಎಲ್.ಸಿ. ಮತು ಪಿ.ಯು.ಸಿ. ವಾರ್ಷಿಕ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಪಡೆದ ಸಮಾಜ ಬಾಂಧವರಿಗೆ ಪ್ರತಿಭಾ ಪುರಸ್ಕಾರವನ್ನು ಶ್ರೀ ಬೈಲೂರು ಬಾಲಚಂದ್ರರಾವ್ ಇವರು ನಡೆಸಲಿದ್ದಾರೆ. ಅರ್ಹ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲಾಗುವುದು.

ಎಲ್ಲಾ ಸದಸ್ಯರು, ಸಮಾಜ ಬಾಂಧವರು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಉಪಸ್ಥಿತರಿರಬೇಕಾಗಿ ವಿನಂತಿ.

**- ಸುಧಾಕರ ಬೆಳ್ಳೆ, ಕಾರ್ಯದರ್ಶಿ**

**ಕಾರ್ಯಕ್ರಮ**

*ಸಮಾಜ ಬಾಂಧವರ ಸಮಾವೇಶ *ಪ್ರಾರ್ಥನೆ *ಸ್ವಾಗತ ಭಾಷಣ *ಶಂಕರ ಜಯಂತಿ *ವರದಿ ವಾಚನ *ಆಯವ್ಯಯ ಮಂಡನೆ *ಪ್ರತಿಭಾ ಪುರಸ್ಕಾರ *ವಿದ್ಯಾರ್ಥಿವೇತನ ವಿತರಣೆ *ದಾನಿಗಳ ಅಭಿನಂದನೆ *ಸದಸ್ಯರ ಅಭಿಪ್ರಾಯ *ಅಧ್ಯಕ್ಷರ ಮಾತು *ಧನ್ಯವಾದ *ಭೋಜನ ಕೂಟ. ಅಪರಾಹ್ನ 2-30ರಿಂದ ಸಮಾಜ ಬಾಂಧವರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

**ವಿ.ಸೂ. : ಆರ್ಥಿಕವಾಗಿ ಹಿಂದುಳಿದ ವ್ಯಾಪ್ತಿಗೆ ಒಳಪಡುವ, ವಿದ್ಯೆಗೆ ಪ್ರೋತಾಹ ನಿಧಿಯನ್ನು ಇಚ್ಛಿಸುವ ಮಕ್ಕಳು 5-5-2011ರ ಒಳಗೆ ಅರ್ಜಿ ಮತ್ತು ಫೋಟೋದೊಂದಿಗೆ ಸಂಘದ ಕಛೇರಿ "ನಂದಗೋಕುಲ ಪಡುಬಿದ್ರಿ" ಇಲ್ಲಿ ಸಂಪರ್ಕಿಸಲು ವಿನಂತಿಸಲಾಗಿದೆ.**

## ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಮತ್ತು ಜ್ಞಾನಭಾರತಿ (ರಿ.)

ಕುಂಜಿಬೆಟ್ಟು, ಉಡುಪಿ

### ಶ್ರೀ ಶಂಕರ ಜಯಂತಿ ಆಚರಣೆ

ತಾ.04-05-2011ರಿಂದ 09-05-2011ರ ವರೆಗೆ ವಿವಿಧ ಸ್ಥಳಗಳಲ್ಲಿ ಶ್ರೀ ಶಂಕರ ಜಯಂತಿ ಪ್ರಯುಕ್ತ ಸ್ಪರ್ಧೆಗಳನ್ನು ವಿವಿಧ ಅದ್ವೈತ ಸಂಘಟನೆಗಳಲ್ಲಿ ಆಚರಿಸಲು ನಿರ್ಧರಿಸಲಾಗಿದೆ. ಅದರಂತೆ **ತಾ.07-05-2011ರಂದು** ಅಪರಾಹ್ನ 2 ಗಂಟೆಯಿಂದ **ವಿವಿಧ ಸ್ಪರ್ಧೆಗಳು ಉಡುಪಿಯ ಶಾರದಾ ಮಂಟಪದಲ್ಲಿ** ನಡೆಯಲಿದೆ.

1. ಸ್ತೋತ್ರ ಕಂಠಪಾಠ ಸ್ಪರ್ಧೆ : ಕಿರಿಯರಿಗೆ ಮತ್ತು ಹಿರಿಯರಿಗೆ (2 ವಿಭಾಗಗಳಲ್ಲಿ)
2. ಪ್ರಬಂಧ ಸ್ಪರ್ಧೆ : ಶ್ರೀ ಶಂಕರ ತತ್ವ ಮತ್ತು ಸಾಧನೆ ಬಗ್ಗೆ
3. ಭಾಷಣ ಸ್ಪರ್ಧೆ : ಹಿಂದೂ ಧರ್ಮಕ್ಕೆ ಶ್ರೀ ಶಂಕರರ ಕೊಡುಗೆ

**ಕಂಠಪಾಠ ಸ್ಪರ್ಧೆಯ 4 ಸ್ತೋತ್ರಗಳು : 1) ಗಣೇಶ ಪಂಚರತ್ನಂ 2) ಅನ್ನಪೂರ್ಣಾಷ್ಟಕಂ 3) ಲಲಿತಾ ಪಂಚರತ್ನಂ 4) ಶಿವಪಂಚಾಕ್ಷರ ಸ್ತೋತ್ರಂ**

**ತಾ.09-05-2011ರಂದು ಶ್ರೀ ಶಂಕರ ಜಯಂತಿ ಸಮಾರೋಪ ಸಮಾರಂಭ**

ಸಮಯ : ಸಂಜೆ 4-00ಗಂಟೆ ಸ್ಥಳ : ಶ್ರೀಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ

- ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಣೆ
- ಮಹಿಳೆ ಮತ್ತು ಮಕ್ಕಳಿಂದ ಶ್ರೀ ಶಂಕರ ಸ್ತೋತ್ರ ಪಠಣ
- ಪ್ರವಚನ : (ಶ್ರೀ ಶಂಕರ ತತ್ವ ಆಧಾರಿತ) ವಿದ್ವಾಂಸರಿಂದ

ಸಂಜೆ 6-00 ಗಂಟೆಯಿಂದ ನೃತ್ಯರೂಪಕ : ಶ್ರೀ ರಾಜರಾಜೇಶ್ವರಿ ನೃತ್ಯಕಲಾ ಕೇಂದ್ರ, ತೀರ್ಥಹಳ್ಳಿ ಇವರಿಂದ (ಪ್ರಾಯೋಜಕರು : ಶ್ರೀ ಶಂಕರ ಸೇವಾ ವೇದಿಕೆ, ಉಡುಪಿ)

**ಕಂಠಪಾಠ ಸ್ಪರ್ಧೆಗೆ ಸ್ತೋತ್ರಗಳ ಪ್ರತಿಯನ್ನು ಮೆನೇಜರ್, ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ ಇವರಲ್ಲಿ ಕಛೇರಿ ಸಮಯದಲ್ಲಿ ಪಡೆದುಕೊಳ್ಳಬಹುದು.**

# ಯಂತ್ರದ ಹಕ್ಕಿಯ ಬೆನ್ನೇರಿ ಹಾರಿದ ಫಾರ್ಮುಲಾ ರೇಸರ್-ಕರ್ವಾಲು ಸುದರ್ಶನ್‌ರಾವ್



ಸ್ಥಾನಿಕ ಸಮಾಜದ ಯುವಕರು ಅವಕಾಶ ಮತು ಪ್ರೋತಾಹ ಸಿಕ್ಕಿದಲ್ಲಿ ಬಹು ಅಪರೂಪದ ಸಾಧನೆಗಳನ್ನು ಮಾಡ ಬಲ್ಲರು ಎಂಬುದಕ್ಕೆ ಕರ್ವಾಲು ಸುದರ್ಶನ್ ರಾವ್ ಒಂದು ನಿದರ್ಶನ.

ಶ್ರೀ ಸುದರ್ಶನರಾವ್, ಕರ್ವಾಲು ಇವರು ಇತ್ತೀಚೆಗೆ ಭಾರತದ ಹೆಸರುವಾಸಿ ವೈಮಾನಿಕ ಸಂಸ್ಥೆಯಾದ ಜೆಟ್ ಏರ್‌ವೇಸ್ (JET AIRWAYS)ನಲ್ಲಿ ಪೈಲಟ್ ಹುದ್ದೆಗೆ ಆಯ್ಕೆ ಯಾಗಿರುತಾರೆ. ಜೆಟ್ ಏರ್‌ವೇಸ್ ಏರ್ಪಡಿಸಿದ ನಾಲ್ಕು ಸುತುಗಳ ಕಠಿಣ ಪರೀಕ್ಷೆ ಯಲ್ಲಿ ತೇರ್ಗಡೆಗೊಂಡ ಸುದರ್ಶನ ರಾವ್ ದಶಂಬರ್ 2010ರಲ್ಲಿ ಪೈಲಟ್ ಹುದ್ದೆಗೆ ಸೇರ್ಪಡೆಗೊಂಡರು. ಅಂದಿನಿಂದ ಮುಂಬೈಯ ಜೆಟ್ ಏರ್‌ವೇಸ್ ನಲ್ಲಿ ತರಬೇತಿ ಪಡೆಯುತಿದ್ದು ನಂತರ ನಡೆದ ಅಂತಿಮ ಪರೀಕ್ಷೆಯಲ್ಲಿ ಶ್ರೀಯುತರು 2ನೇ ರ್‍ಯಾಂಕ್‌ಗಳಿಸಿ ತಮ್ಮ ಅರ್ಹತೆಯನ್ನು ಪ್ರದರ್ಶಿಸಿ 2011 ಮಾರ್ಚ್ ತಿಂಗಳಲ್ಲಿ BOEING-737 ವಿಮಾನದಲ್ಲಿ ಹೆಚ್ಚಿನ ಪರಿಣತಿಯ ತರಬೇತಿಗಾಗಿ ಬೆಲ್ಜಿಯಂ (Belgium)ಗೆ ತೆರಳಿದ್ದಾರೆ.

ಸುದರ್ಶನರಾವ್, ಕರ್ವಾಲ್ ಇವರು ಬೆಂಗಳೂರಿನಲ್ಲಿ ನೆಲೆಸಿರುವ ಶ್ರೀ ಶಂಕರ ನಾರಾಯಣ ರಾವ್ ಕರ್ವಾಲ್ ಮತು ಶ್ರೀಮತಿ ಸಂಧ್ಯಾ ದಂಪತಿಗಳ ಪುತ್ರ. ಫಾರ್ಮುಲಾ ಕಾರ್‌ರೇಸ್‌ನಲ್ಲಿ ಛಲದಿಂದ ತೊಡಗಿಸಿಕೊಂಡ ಶ್ರೀ ಸುದರ್ಶನ್ ಛಲಬಿಡದ ತ್ರಿವಿಕ್ರಮನಾಗಿ ಸೋಲುಗಳ ಬೆನ್ನೇರಿ ಜಯಶಾಲಿಯಾದ, ರಾಷ್ಟ್ರೀಯ ಮಟ್ಟದಲ್ಲಿ ತನ್ನನ್ನು ಗುರುತಿಸಿಕೊಂಡ ಬಹುಮುಖಿ ಪ್ರತಿಭೆಯ ತರುಣ. ಈ ಹಿಂದೆ **ಶ್ರೀಶಾರದಾ**ದಲ್ಲಿ ಪ್ರಕಟವಾದಂತೆ "ಫಾರ್ಮುಲಾ ಕಾರ್ ರೇಸ್- 2009"ರಲ್ಲಿ ರಾಷ್ಟ್ರೀಯ ಪ್ರಶಸ್ತಿಯನ್ನು ಗಳಿಸಿ ನಮ್ಮ ಸಮಾಜದ ಇತಿಹಾಸದಲ್ಲಿ ಇಂತಹ ಕ್ರೀಡೆಯಲ್ಲಿ ಈ ಸಾಧನೆ ಮಾಡಿದ ಮೊದಲಿಗನಾಗಿ ದಾಖಲೆ ಮಾಡಿದ್ದರು. ಇವರ ತಂಗಿ ಸಂಗೀತಾ ರಾವ್, ಕರ್ವಾಲ್ ಇಂಜಿನಿಯರಿಂಗ್ ಪದವೀಧರೆ. ಪ್ರಸಕ್ತ ಬೆಂಗಳೂರಿನ M.P.Birla Institute of Management ನಲ್ಲಿ MBA ವ್ಯಾಸಂಗ ನಡೆಸುತ್ತಿದ್ದಾರೆ. ತಂದೆ ತಾಯಿಯರ ಜತೆ ಸಂಗೀತಾ ರಾವ್ ಕೂಡಾ ಅಣ್ಣನ ಗುರಿ ಸಾಧನೆಗೆ ಪ್ರೇರಕ ಶಕ್ತಿಯಾಗಿದ್ದರು.

ಶ್ರೀ ಶಂಕರ ನಾರಾಯಣರಾವ್ ಕರ್ವಾಲ್ ಮತು ಅವರ ಮನೆಯವರೆಲ್ಲರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು ಮತು ಭವಿಷ್ಯದ ಸಾಧನೆಗಳಿಗೆ ಶುಭ ಹಾರೈಕೆಗಳು. ನೆಲದ ಮೇಲಿನ ಯಾನದಲ್ಲಿ ಕಂಡ ನಿಷ್ಠೆ ವಾಯುಯಾನದಲ್ಲೂ ಪ್ರಕಟವಾಗಲಿ. "ಹೆತವರ ಬೆಂಬಲ, ಪ್ರೋತಾಹ ಹಾಗೂ ನಮ್ಮ ಸಮಾಜದ ಬಾಂಧವರ ಪ್ರೋತಾಹಗಳಿಂದಾಗಿ ತಾನು ತನ್ನ ಮಹಾದಾಕಾಂಕ್ಷೆಯನ್ನು ಸಾಧಿಸಲು ಸಾಧ್ಯವಾಯಿತು" ಎಂದು ಶ್ರೀ ಸುದರ್ಶನ ರಾವ್ ವಿನೀತ ಭಾವದಿಂದ ತಮ್ಮ ಅನಿಸಿಕೆಯನ್ನು ತಿಳಿಸಿದ್ದಾರೆ.

ಕರ್ವಾಲ್ ಸುದರ್ಶನರಾವ್ ತಮ್ಮ ಸಾಧನೆಯ ದಾರಿಯಲ್ಲಿ ಎತ್ತರಕ್ಕೇರಲಿ ಎಂಬುದು ಎಲ್ಲರ ಹಾರೈಕೆ.

ವರದಿ : **ಯು. ಅರವಿಂದ ಕುಮಾರ್**


## ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ

**"ನಂದ ಗೋಕುಲ", ಕಾರ್ಕಳ ರಸ್ತೆ, ಪಡುಬಿದ್ರಿ**

**ಸಂಘದ ಉದ್ದೇಶಗಳು :**

1. ಸಮಾಜ ಬಾಂಧವರನ್ನು ಒಗ್ಗೂಡಿಸುವುದು.
2. ಸಮಾಜದ ನೆಲೆಯನ್ನು ಮತ್ತೆ ಕಂಡುಕೊಳ್ಳುವುದು.
3. ಸುಧಾರಣೆಯೊಂದಿಗೆ ಸಂಪ್ರದಾಯವನ್ನು ಪಾಲಿಸುವುದು.
4. ನಮ್ಮ ಸಂಘದ ವ್ಯಾಪ್ತಿಯಲ್ಲಿ ಅಗತ್ಯವಿದ್ದಾಗ ನಮ್ಮವರಿಗೆ ರಕ್ತದಾನ ಮಾಡುವುದು.
5. ನಮ್ಮ ಸಂಘದ ವ್ಯಾಪ್ತಿಯಲ್ಲಿ ಸಮಾಜದಲ್ಲಿ ತಲೆದೋರುವ ಆಕಸ್ಮಿಕ ಕಾಯಿಲೆಗಳಿಗೆ ಅಥವಾ ಅವಘಡಗಳಿಗೆ ಪ್ರತಿ ಊರಿನಲ್ಲೂ ಸಹಾಯಕ್ಕಾಗಿ 'ತುರ್ತುಕರೆ'ಗಾಗಿ ಸಮಾಜದ ಸ್ವಯಂಸೇವಕರ ನೇಮಕ.
6. ನಮ್ಮ ಸಂಘದ ವ್ಯಾಪ್ತಿಯಲ್ಲಿ ಕನಿಷ್ಠ ಒಂದು ಕಡೆ ರೂ.25,000/- ಬಂಡವಾಳದ 'ತುರ್ತುನಿಧಿ'ಯನ್ನು ಸ್ಥಾಪಿಸಲಾಗುವುದು ಮತ್ತು ಇತರ ಪ್ರಯೋಜನವನ್ನು ತೊಂದರೆಗೀಡಾದ ಸಮಾಜ ಬಾಂಧವರು ಒಂದು ತಿಂಗಳವರೆಗೆ ಉಪಯೋಗಿಸುವ ಅವಕಾಶವನ್ನು ಪಡೆದು ನಂತರ ಬಡ್ಡಿ ರಹಿತವಾಗಿ ಹಿಂತಿರುಗಿಸಬೇಕು. ಮುಂದೆ ಈ ಯೋಜನೆಯನ್ನು ಇನ್ನೊಂದು ಕಡೆಯಲ್ಲಿ ವಿಸ್ತರಿಸಲಾಗುವುದು. ತುರ್ತುನಿಧಿಗಾಗಿ 9902169119 ನಂದಗೋಕುಲ ಆಫೀಸ್ ಕಚೇರಿಯನ್ನು ಸಂಪರ್ಕಿಸಿ.
7. ಸಂಘದ ವ್ಯಾಪ್ತಿಯೊಳಗೆ ಬರುವ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಪ್ರತೀ ವರ್ಷ ಪ್ರೋತ್ಸಾಹ-ಧನದೊಂದಿಗೆ ಗೌರವಿಸಲಾಗುವುದು.
8. ಸಂಘದ ವ್ಯಾಪ್ತಿಯಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳನ್ನು ಸಹಾಯ-ಧನವನ್ನು ಇತ್ತು ಪ್ರೋತ್ಸಾಹಿಸಲಾಗುವುದು. ಪಿ.ಯು.ಸಿ.-ರೂ.2,500, ಪದವಿ-ರೂ.5,000, ಇಂಜಿನಿಯರಿಂಗ್ ಮತ್ತು ವೈದ್ಯಕೀಯ-ರೂ.10,000
9. ಇದಲ್ಲದೇ ಪ್ರಸಕ್ತ ವರ್ಷದಿಂದ ಮದುವೆ ಕಾರ್ಯದಲ್ಲಿ ಆರ್ಥಿಕವಾಗಿ ಹಿಂದುಳಿದು ಸಹಾಯ-ಧನವನ್ನು ಅಪೇಕ್ಷಿಸುವಲ್ಲಿ ರೂ.20,000 ಮೊಬಲಗನ್ನು ಕೊಡುವ ಯೋಜನೆಯಿದೆ.
10. ಇದಲ್ಲದೇ ಮೇಲಿನ ಎಲ್ಲಾ ಅಂಶಗಳನ್ನು ಸಂಘ ಬಲಾಢ್ಯವಾಗಿ ಬೆಳೆದ ನಂತರ ನಮ್ಮ ಇಡೀ ಸಮಾಜಕ್ಕೆ ವಿಸ್ತರಿಸುವ ಆಶಯವಿದೆ.
11. ಸಂಘವು ಎಂದೂ 'Donation' ಎಂಬ ಪದಕ್ಕೆ ಕಟ್ಟು ಬೀಳದೆ ಸ್ವತಃ ಮುಂದೆ ಬರುವ ದಾನಿಗಳ ಬೆಂಬಲವನ್ನು ಪಡೆಯುತ್ತದೆ.
12. ಸ್ವಂತ ಉದ್ಯೋಗ ಮಾಡುವ ಸಮಾಜ ಬಾಂಧವರಿಗೆ ಪ್ರೋತ್ಸಾಹ ಅಥವಾ ಧನ ಸಹಾಯ ಮಾಡುವ ಬಗ್ಗೆ ಮುಂದಿನ ದಿನಗಳಲ್ಲಿ ಚಿಂತಿಸಲಾಗುವುದು.

# ನಗುವ ಬೇಸಗೆ ಬಂದಿದೆ



- ವೈ. ಶಂಕರನಾರಾಯಣ ರಾವ್,
ಪಡುಬಿದ್ರಿ

ವಸಂತ, ಗ್ರೀಷ್ಮ, ವರ್ಷ, ಶರದ್, ಹೇಮಂತ, ಶಿಶಿರ ಎಂಬ ಆರು ಋತುಗಳಿದ್ದು ಋತುಗಳ ರಾಜ ವಸಂತನು ತನ್ನ ಸಕಲ ಪರಿವಾರದೊಂದಿಗೆ ವೈಭವಯುತವಾಗಿ ಭುವಿಗೆ ಅವತರಿಸಿದ್ದಾನೆ. ತನ್ನೊಂದಿಗೆ ನಗುವ ಬೇಸಗೆಯನ್ನೂ ತಂದಿದ್ದಾನೆ. ಮಾನವ ಸಮಾಜ ಚಟುವಟಿಕೆಯ ಉತ್ತುಂಗದಲ್ಲಿರುವ ಕಾಲ ಬೇಸಗೆ. ಆದುದರಿಂದಲೇ ಇದು ನಗುವ ಬೇಸಗೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಇದು ಬಿಡುವಿನ ಸಮಯ. ಹೆಚ್ಚಿನ ಮದುವೆ, ಉಪನಯನ ಮೊದಲಾದ ಶುಭ ಕಾರ್ಯಗಳೂ ನೆರವೇರುವುದೂ ಈ ಋತುವಿನಲ್ಲಿಯೇ. ರಥೋತ್ಸವ, ನಾಗಮಂಡಲ, ಹೋಮ-ನೇಮಗಳೂ ಈ ಕಾಲದಲ್ಲಿಯೇ ನೆರವೇರುತ್ತವೆ. ಗ್ರಹಸ್ಥನಿಗೆ ತನ್ನ ಪುಟ್ಟ ಸಂಸಾರ ದೊಂದಿಗೆ ಪ್ರವಾಸಕ್ಕೂ ಇದು ಪ್ರಶಸ್ತ ಕಾಲ.

ಚೈತ್ರ, ವೈಶಾಖ ಮಾಸಗಳ ವಸಂತ ಕಾಲವು ಮಾವು-ಫಲವಸ್ತುಗಳು ಫಲಿಸುವ ಕಾಲ. ಕೋಗಿಲೆ ಕುಕಿಲ್ವಕಾಲ. ಪ್ರಣಯಿಗಳಿಗೆ ಇದು ಆಮೋದ-ಪ್ರಮೋದದ ಕಾಲ. ಈ ಋತುವು ಕವಿಗಳನ್ನು ಪ್ರಭಾವಿಸಿದಷ್ಟು ಬೇರಾರನ್ನೂ ಪ್ರಭಾವಿಸಿಲ್ಲ. ವಿವಾಹಾಕಾಂಕ್ಷಿ ನವ ತರುಣಿ ಯೊಬ್ಬಳಲ್ಲಿ ಬೇಸಗೆ ಸಪ್ತರಂಗುಗಳ ತರಂಗಗಳನ್ನು ಎಬ್ಬಿಸಿದೆ. ತನ್ನ ಪರಿಸರ, ಪ್ರಕೃತಿ ಅವಳಲ್ಲಿ ರೋಮಾಂಚನವನ್ನುಂಟು ಮಾಡಿದೆ. ಕೆಲವು ದಿನಗಳ ಹಿಂದೆ ಅವಳು ಸಮಾರಂಭವೊಂದರಲ್ಲಿ ಸುಂದರ ತರುಣನೊಬ್ಬನನ್ನು ಸಂಧಿಸಿದ್ದಾಳೆ. ಅವನ ಮಧುರ ನೆನಪಿನಲ್ಲಿ ಅವಳ ಭಾವನೆಗಳು ಗರಿಗೆದರಿ ಬಾಂದಳದಲ್ಲಿ ವಿಹರಿಸುತ್ತಿವೆ. ಅವಳ ತುಡಿತವನ್ನು ಕವಿ ಕಂಡ ಬಗೆ ಹೀಗಿದೆ :-

*ನಗುವ ಬೇಸಗೆ ಬಂದಿದೆ*
*ಇಂದು ಮಾಗಿಯು ಮುಗಿವ ಮುನ್ನವೆ*
*ನಗುವ ಬೇಸಗೆ ಬಂದಿದೆ*
*ಕಾಮನಂಬಿನ ಕೆಳೆಯ ರಂಗುಗಳೆಲ್ಲವನ್ನೂ ತಂದಿವೆ*
*ಬಾಳ ಬಟ್ಟೆಯ ಎರಡು ಕಡೆಯಲೂ ಕಣ್ಣೆ ಹಬ್ಬವು ಹರಡಿದೆ.*
*ಮಾವು ಹೊಂಗೆಗಳಂತೆ ಮನವಿದು ಹೊಸ ಚಿಗುರನ್ನೊಡ್ಡಿದೆ*
*ಸಂಜೆ ಮಸುಕದು ಕತ್ತಲಾಗದು ನಭದಿ ಚುಕ್ಕಿಗಳೊಡೆದಿವೆ*
*ತುಂಬು ಚಂದ್ರನ ಬೆಳ್ದಿದೀವಿಗೆ ಬಾನ ನಡುವಿಗೆ ತೂಗಿದೆ*
*ನಲ್ಲ ನಿಮ್ಮನು ಕಂಡ ದಿನವೇ ಆಸೆಯಂಕುರವಿಟ್ಟಿತೂ*
*ಎಂಟು ದಿನಗಳು ಕಳೆವ ಮುನ್ನವೇ ಬೆಳೆದು ಹೆಮ್ಮರವಾಯಿತು*
*ಯಾವ ಜನ್ಮದ ಕೆಳೆಯೋ ಕಾಣೆನು ಕಂಡ ಕೂಡಲೇ ಒಲಿಸಿತೂ*
*ಕಣ್ಣೆ ರೂಪವು ಇಳಿವ ಮುನ್ನವೇ ಎದೆಗೆ ಪ್ರೇಮವು ಹರಿಯಿತು.*

ಇಲ್ಲೊಬ್ಬ ಕವಿಗೆ ವಸಂತಕಾಲವೆಂದರೆ ಮಧುಮಾಸವೂ ಅಹುದು. ಕವಿ ತನ್ನ ಲಹರಿಗೆ ರಂಗು ತುಂಬಲು ಮಧುಕರಿಗಳನ್ನೇ ಈ ರೀತಿ ಆಹ್ವಾನಿಸುತ್ತಾನೆ.

*ಮಧುಮಾಸ ಬಂದಿಹುದು ಮಧುಕರಿಗಳೇ ಬನ್ನಿ*
*ಮಧುರತರ ಗೀತೆಗಳಿ ನಾವು ನಲಿವಾ*
*ಹೃದಯದಾಸೆಗಳೆಲ್ಲ ಫಲಿತವಾಗುವ ಕಾಲ*
*ಮೃದು ಹೃದಯ ಕುಸುಮಗಳು ಅರಳ್ವ ಕಾಲ*
*ಮಳೆಗಾಲ ಹಿಮಗಾಲ ಚಳಿಗಾಲ ಹೋಗಿಹವು*
*ತಳಿರ್ಗಾಲ ಬೆಳೆಗಾಲ ಬಲಗಾಲ ಬಹವೂ*
*ಇಳೆಯ ವಿಭವಗಳೆಲ್ಲ ಮೊಳೆತು ಬೆಳೆಯುವುದೆಂದು*
*ಹೊಳೆ ಹೊಳೆದು ಹೊತ್ತರೆಯ ರವಿಯು ಹೇಳುವನು*
*ಹುಲ್ಗರೆಯ ಶಿರದಲ್ಲಿ ಮಾಂದಳಿರ ತಳದಲ್ಲಿ*
*ಮೊಲ್ಲೆ ಮಲ್ಲಿಗೆ ತೆರೆದು ಬಿರಿಯುತಿರುವಲ್ಲಿ*
*ಚೆಲ್ವ ಹಸುರೊರೆಯಲ್ಲಿ ಮಲ್ಲ ಹೊಂದೆನೆಯಲ್ಲಿ*
*ಚೆಲ್ಲಿಹವು ಇಬ್ಬನಿಯ ಮುತ್ತುಗಳಿದಿಲ್ಲಿ*

ವಸಂತ ಕಾಲದಲ್ಲಿ ಪರಪುಟ್ಟ ಕೋಗಿಲೆ ಯದೇ ಕಾರುಬಾರು. ಎಲ್ಲೆಲ್ಲೂ ಅವುಗಳದ್ದೇ ಕೂಜನ. ಕವಿ ಮನಸ್ಸಿಗೂ ಅವುಗಳದ್ದೇ ಧ್ಯಾನ. ಕವಿಯು ಕೋಗಿಲೆಯನ್ನು ವಿಧ ವಿಧಗಳಿಂದ ಪ್ರಶಂಸಿಸಿ ಹಾಡುವಂತೆ ಹೀಗೆ ಉತ್ತೇಜಿಸುತ್ತಾನೆ-


*ಈಗ ತಾನೆ ಬಂದಿತೇನೆ, ಮಧುರ ಕಂಠ ಕೋಗಿಲೆ*
*ಜಗದ ಬನದಿ ನಿನ್ನ ಮನದಿ, ಗಾನವಾಯ್ತು ಒಮ್ಮೆಲೇ*
*ಕೆಂಪು ತಳಿರು ತಂಪ ನೋಡು ಸೂಸುತಿಹುದು ಮಾಮರ*
*ಅಲ್ಲೆ ಕುಳಿತು ಎಲ್ಲ ಮರೆತು, ಉಲಿಯುತಿಹುದು ಕೋಗಿಲೆ*
*ಗಾನ ಕೇಳಿ ಮೌನ ತಾಳಿ, ಮೂಕವಾಯ್ತು ಭಾವನೆ*
*ಮನುಜಲೋಕ ದಿವಿಜನಾಕ, ಕಿರಿದು ಕೂಹೂ ಕೂಜನೇ*
*ಎದೆಯ ಮಿಡಿದು ತಾಳ ಹಿಡಿದು ಕುಣಿಯುತಿಹುದು ಈ ಪಣಾ*
*ಕಸದ ಕಡಲು ಹಿಗ್ಗಿದೊಡಲು ತರತರಂಗ ಭಾಜನಾ*
*ರಸದ ಚಿಲುಮೆ ಹರಿಸಿ ಒಲುಮೆ ಸುಧೆಯ ನೀಡು ಕೋಗಿಲೆ*
*ಮೌನಧ್ಯಾನ ನಿನಗೆ ಊನ ಕುಕಿಲ ಜಾಣ ಕೋಗಿಲೆ*

ಮುನಿ ದಂಪತಿಯ ಹತ್ಯೆಯಿಂದ ಶಪಿತನಾದ ಪಾಂಡುವು ನೊಂದು ಮಡದಿಯ ರೊಂದಿಗೆ ವಾನಪ್ರಸ್ಥವನ್ನು ಸ್ವೀಕರಿಸಿದ್ದಾನೆ. ''ಸತಿಯನ್ನು ಸೇರಿದರೆ ಆಗಲೇ ಅವನಿಗೆ ಮರಣ'' ಎಂಬ ಶಾಪಲಿಖಿತವಿದೆ. ಅವನನ್ನು ಮರಣದ ಸಮ್ಮುಖಕ್ಕೆ ಸೆಳೆಯಲು ವಸಂತನು ಹುನ್ನಾರ ನಡೆಸಿದ್ದಾನೆ. ಪಾಂಡುವಿನ ಮೇಲೆ ದಾಳಿ ನಡೆಸಿದ ರಂಗು ರಂಗಿನ ವಸಂತ ಕಾಲವನ್ನು ಕವಿ ಕುಮಾರ ವ್ಯಾಸನ ನುಡಿಗಳಲ್ಲಿಯೇ ಹೃದ್ಗತ ಮಾಡೋಣ:-

*ಮೊರೆವ ತುಂಬಿಯ ಗಾಯಕರ ನಯ*
*ಸರದ ಕೋಕಿಕ ಪಾಠಕರ ಬಂ*
*ಧುರದ ಗಿಳಿಗಳ ಪಂಡಿತರ ಮಾಮರದ ಕರಿಘಟೆಯ*
*ಅರಳಿದಂಬುಜ ಸತ್ತಿಗೆಯ*
*ಜರಿಯ ಕುಸುಮದ ಚಾಮರಿಯ ಚಾ*
*ತುರ ವಸಂತ ನೃಪಾಲ ನಡೆದನು ಪಾಂಡುವಿನ ಮೇಲೆ*

ಹದಿ ಹರೆಯದ ಸುಂದರ ಹುಡುಗಿ ಯೊಬ್ಬಳು ಬೇಸಗೆಯ ಶುಭ ಸಮಾರಂಭಕ್ಕೆ ಹೊರಡಲು ತನ್ನನ್ನು ತಾನೇ ಶೃಂಗರಿಸಿ ಕೊಳ್ಳುತ್ತಿದ್ದಾಳೆ. ಅವಳು ಮಹಾ ಚೆಲ್ಲುಗಾತಿ. ಚಂಚಲೆಯೂ ಹೌದು. ಅದಕ್ಕೇ ಇರಬೇಕು, ಮನಸ್ಸು, ದೇಹ ಸಹಕರಿಸುತ್ತಿಲ್ಲ. ಉದ್ವೇಗ ಚಡಪಡಿಕೆಗಳಿಂದ ರೂಮಿನ ಒಳಗೂ, ಹೊರಗೂ ಸುಳಿದಾಡುತ್ತಿದ್ದಾಳೆ. ಅವಳ ಅಮ್ಮ ''ಆಯ್ತೇನೇ; ಮುಗಿಯಿತೇನೆ'' ಎಂದು ವಿಚಾರಿಸುತ್ತಲೇ ಅವಸರಿಸುತ್ತಿದ್ದಾಳೆ. ಬಾಲೆಯ ಸಂದಿಗ್ಧತೆಯನ್ನು ಕವಿ ಹಾಸ್ಯದಿಂದ ವರ್ಣಿಸಿದ ಪರಿಯನ್ನು ನೋಡಿರಿ:-

*ಹುಚ್ಚು ಖೋಡಿ ಮನಸು*
*ಅದು ಹದಿನಾರರ ವಯಸು*
*ಮಾತು ಮಾತಿಗೇಕೊ ನಗು*
*ಮರು ಘಳಿಗೆಯ ಮೌನ*



ಚಿತ್ರ ಕೃಪೆ : ಕೃತಿ 'ಹನಿಸೋನೆ'

*ಕನ್ನಡಿ ಮುಂದವು ಹೊತ್ತು*
*ಬರೆಯದಿರುವ ಕವನ*
*ಸೆರಗು ತೀಡಿದಷ್ಟು ಸುಕ್ಕು*
*ಹಠ ಮಾಡುವ ಕೂದಲು*
*ನಿರಿ ಏಕೋ ಸರಿಯಾಗದು*
*ಮತ್ತೆ ಒಳಗೆ ಹೋದಳು*
*ಕೆನ್ನೆ ಕೊಂಚ ಕೆಂಪಾಯಿತೆ*
*ತುಟಿಯ ರಂಗು ಹೆಚ್ಚಾಯಿತೆ*
*ನಗುತ ಅವಳ ಛೇಡಿಸುತಿದೆ ಗಲ್ಲದ ಕರಿಮಚ್ಚೆ*


ಇಷ್ಟೆಲ್ಲಾ ಜೀವನೋತ್ಸಾಹವನ್ನು ತುಂಬುವ ಚೈತ್ರದ ಕಾಲವು ನಿರಾಶಾವಾದಿಯೊಬ್ಬರಿಗೆ ಅದೇಕೋ ಉಲ್ಲಾಸ ತರದೇ ಹೋಯಿತು. ಇವರೊಬ್ಬ ಮಕ್ಕಳಿಂದ ದೂರವಾಗಿ ಒಂಟಿಯಾಗಿ ವೃದ್ಧಾಶ್ರಮದಲ್ಲಿರುವ ವೃದ್ಧರಾಗಿರಬಹುದು; ದೀರ್ಘಕಾಲದ ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವ ರೋಗಿಯಾಗಿರಬಹುದು; ಜೀವನಕ್ಕೆ ಜೀವ ತುಂಬುವ ಸಂಗಾತಿಯನ್ನು ಕಳೆದುಕೊಂಡಿರುವ ವಿಧುರ/ವಿಧವೆ ಆಗಿರಬಹುದು ಅಥವಾ ವಿವಾಹ ವಿಚ್ಛೇದನದ ಕಹಿಯನ್ನುಂಡ ಸ್ತ್ರೀ-ಪುರುಷ ಆಗಿರಬಹುದು. ಅವರಿಗೆ ಋತುಗಳಲ್ಲಿ ವ್ಯತ್ಯಾಸವೇನೂ ಗ್ರಹಿಕೆಗೆ ಬಾರದು. ಅವರ ಅಳಲನ್ನು ನೋಡೋಣ.

*ವರುಷ ಹೋಯಿತು ವರುಷ ಬಂದಿತು*
*ಹರುಷ ಬಾರದು ಬಾರದು*
*ಬಯಕೆ ಆಸೆಯೇ ಒಂದೂ ಫಲಿಸದೂ*
*ಎದೆಯ ವೇದನೆ ತೀರದೂ*
*ಇರುಳು ಬಂದಿತು ಇರುಳು ಹೋಯಿತು*
*ಮನದ ಇರುಳೇ ಕಳೆಯದೂ*
*ಇರುಳ ಕತ್ತಲೆಗಿಂತ ನಿಬಿಡವು*
*ಬೆಳಕು ಅರಿವಿಗೆ ಹಾಯದು*
*ಶಿಶಿರ ಕಳೆಯಿತು ಚೈತ್ರ ಸುಳಿಯಿತು*
*ಮನದ ಶಿಶಿರವು ಕಳೆಯದು*
*ವನವು ಹೊಸ ಹೂ ತಳಿರನಿಟ್ಟರೂ*
*ಬಾಳ್ಗೆ ಬಾರದು ಚೈತ್ರವೂ*
*ಹೊಲಗಳಲ್ಲಿಯ ಕದಡು ತಿಳಿಯಿತು*
*ಚೆಲುವು ನೈದಿಲೆ ಅರಳ್ದುವೂ*
*ಮನದ ಕೊಳಚೆಯ ಕದಡು ಮುರಿಯದು*
*ತಿಳಿಯ ಹೂಗಳು ಬಾರವೂ*

ಚೈತನ್ಯ ಉಕ್ಕುವ ಈ ಸಂಭ್ರಮದ ಚೈತ್ರ ಕಾಲವು ಸಮಾಜ ಬಾಂಧವರಿಗೆ ಸುಖ ಶಾಂತಿ ನೆಮ್ಮದಿ ಹರ್ಷೋಲ್ಲಾಸಗಳನ್ನು ನೀಡಲಿ. ''ಸೃಷ್ಟಿ ಬರೆಯುವ ಚೈತ್ರ ಕಾವ್ಯದ ಮಧು ಪವಾಡದ ಕಥೆಗಳು'' ಉತ್ತಮ ಸಂದೇಶಗಳನ್ನು ಎಲ್ಲರಿಗೂ ರವಾನಿಸಲಿ ಎಂದು ಹಾರೈಸೋಣ.

(ಇದರಲ್ಲಿ ಬಳಸಿರುವ ಕವನಗಳನ್ನು ರಚಿಸಿರುವ ಎಲ್ಲಾ ಹಿರಿಯ ಕವಿಗಳಿಗೆ ಲೇಖಕ ಆಭಾರಿ) □

Krishna Rao
Ph :2520652
Mob. :9902029048
KISHAN

Studio & Video

Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

## ಚುಟುಕಗಳು

**ಅನಿಸಿಕೆ**

ತಿಂಗಳ 14ರಂದು ಪ್ರಾಯೋಜಕತ್ವದಲಿ
ಶ್ರೀಶಾರದಾ ಪತ್ರಿಕೆಯ ಊಟ
ಅಂದು ಸ್ಥಾನಿಕ ಬಂಧುಗಳದ್ದೇ ಸ್ನೇಹ ಕೂಟ
ಮಕ್ಕಳಿಗೆ ಪೇಪರ್ ಮಡಚುವ ಆಟ
ನಮ್ಮೆಲ್ಲರಿಗೂ ಒಂದಾಗಿ ಬಾಳುವ ಪಾಠ

**ಒಲವು-ಗೆಲುವು**

ನನಗೆ ಅವಳ ಒಲವು
ಅವಳಿಗೆ ಅದುವೇ ಗೆಲುವು
ತಳುಕು ಬಳುಕು ನಡುವು
ಪ್ರತಿ ಕ್ಷಣ ಅವಳನ್ನು ನೆನೆಹುತಿಹುದು ಮನವು

- ವೈ.ಎ.ರಾವ್

## ಹನಿಗವನ

**ಬರಹಕ್ಕೆ**


ನಲ್ಲೆ
ನನ್ನ
ಬರಹಕ್ಕೆ
ನೀ ನೀಡಿದ
ಸ್ಪೂರ್ತಿ
ತಂದು
ಕೊಡಲಿಲ್ಲ
ನನ್ನ
ಬರಹಕ್ಕೆ
ಕೀರ್ತಿ

- ಮಾರ್ಪಳ್ಳಿ ಆರ್.ಮಂಜುನಾಥ್

ಪುಸ್ತಕ ಪರಿಚಯ

# ''ಶೃಂಗೇರಿ ಶ್ರೀ ಶಾರದಾ ಪೀಠ''

\- ಡಾ। ಎಚ್.ಸತ್ಯನಾರಾಯಣ




ಪವಿತ್ರ ಭಾರತ ಜನ್ಮಕೊಟ್ಟ ಅಸಾಧಾರಣ ತತ್ತ್ವಜ್ಞಾನಿಗಳಲ್ಲಿ ಶ್ರೀ ಆದಿಶಂಕರಾಚಾರ್ಯರು ಪ್ರಮುಖರು. ಅತಿ ಕಡಿಮೆ ಅವಧಿಯಲ್ಲಿ ಈ ದೇಶದ ಚರಿತ್ರೆ ಮತ್ತು ಸಂಸ್ಕೃತಿಯ ಮಾರ್ಗವನ್ನೇ ಬದಲಿಸಿದ ಮಹಾಪುರುಷರು ಅವರು. ಪವಾಡ ಸದೃಶವಾದ ತಮ್ಮ ಜೀವನ-ಸಾಧನೆಗಳ ಮೂಲಕ ಸನಾತನ ಧರ್ಮಕ್ಕೆ ನೆಲೆ-ಬೆಲೆಗಳನ್ನು ದೊರಕಿಸಿಕೊಟ್ಟ ಅದ್ಭುತ ವ್ಯಕ್ತಿತ್ವ ಅವರದು.

ಅವೈದಿಕಮತಗಳನ್ನು ದೂರೀಕರಿಸಿ ಷಣ್ಮತಗಳನ್ನು ಸ್ಥಾಪಿಸಿದುದು, ಪಂಚಯತನ ಪೂಜಾ ಪದ್ಧತಿಯನ್ನು ರೂಢಿಗೆ ತಂದುದು, ದಶನಾಮಿಸನ್ಯಾಸವ್ಯವಸ್ಥೆ, ಅದ್ವೈತ ಸಿದ್ಧಾಂತದ ಪ್ರತಿಪಾದನೆ, ಸನಾತನ ಧರ್ಮದ ಸ್ಥಾಪನೆ ಇತ್ಯಾದಿ ರಚನಾತ್ಮಕ ಚಟುವಟಿಕೆಗಳ ಜನೆತೆಗೆ ದೇಶಾದ್ಯಂತ ಸಂಚರಿಸಿ ರಾಷ್ಟ್ರೀಯ ಏಕತೆಯನ್ನು ಸಾಧಿಸಿ, ಈ ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಆಮ್ನಾಯ ಪೀಠಗಳನ್ನು ಸ್ಥಾಪಿಸಿದರು. ಅವುಗಳಲ್ಲಿ 'ದಕ್ಷಿಣಾಮ್ನಾಯ ಶೃಂಗೇರಿ ಶ್ರೀಶಾರದಾ ಪೀಠ'ವು ಮೊದಲನೆಯ ಮತ್ತು ಪ್ರಮುಖವಾದ ಪೀಠ.

ಆಚಾರ್ಯ ಶಂಕರರಿಂದ ಪ್ರಾರಂಭವಾದ ಇಲ್ಲಿನ ಗುರು ಪರಂಪರೆಯಲ್ಲಿ ಇಂದಿನ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮಿಗಳವರು ಮೂವತ್ತಾರನೆಯ ಪೀಠಾಧಿಪತಿಗಳು. ತಪೋನುಷ್ಠಾನ ಸಂಪನ್ನರೂ, ಶ್ರೇಷ್ಠ ತತ್ತ್ವಜ್ಞಾನಿಗಳ, ಬಹುಭಾಷಾ ಕೋವಿದರೂ, ಮಾನವೀಯತೆಯ ಸಾಕಾರ ಮೂರ್ತಿಗಳೂ ಆದ ಅವರ ಷಷ್ಟ್ಯಬ್ದಿಪೂರ್ತಿ ವರ್ಷದಲ್ಲಿ ಪ್ರಸಿದ್ಧ ಲೇಖಕರೂ, ವಿಶ್ರಾಂತ ಅಧ್ಯಾಪಕರೂ ಆದ ಡಾ। ಎಚ್.ವಿ.ನರಸಿಂಹ ಮೂರ್ತಿಯವರು ಬರೆದಿರುವ ಈ ಪುಸ್ತಕ ಅತ್ಯಂತ ಉಪಯುಕ್ತವಾದುದು.

ಸುಮಾರು 1250 ವರ್ಷಗಳ ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯುಳ್ಳ ಶೃಂಗೇರಿ ಶ್ರೀ ಶಾರದಾ ಪೀಠದ ಸಮಗ್ರ ಪರಿಚಯ ಈ ಪುಸ್ತಕದಲ್ಲಿದೆ. ಪುಣ್ಯಕ್ಷೇತ್ರ ಶೃಂಗೇರಿಯ ಹಿನ್ನೆಲೆ, ಅಲ್ಲಿನ ದೇವಸ್ಥಾನಗಳು, ಲೋಕಗುರು ಶ್ರೀ ಶಂಕರಭಗವತ್ಪಾದರಿಂದ ಮೊದಲ್ಗೊಂಡು ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ವರೆಗಿನ ಅವಿಚ್ಛಿನ್ನ ಗುರುಪರಂಪರೆ, ಸಂಸ್ಕೃತವಾಙ್ಮಯಕ್ಕೆ ಈ ಗುರುಪರಂಪರೆಯ ಕೊಡುಗೆ, ಜಗದ್ಗುರುಗಳವರು ಕೈಗೊಳ್ಳುವ ಚಾತುರ್ಮಾಸ್ಯವ್ರತ, ಶ್ರೀ ಮಹಾಗಣಪತಿ ವಾಕ್ಯಾರ್ಥವಿದ್ವತ್ಸಭೆ, ಶರನ್ನವರಾತ್ರಿ ಮೊದಲಾದ ಉತ್ಸವಗಳು-ಇತ್ಯಾದಿಗಳ ಕುರಿತು ಉತ್ತಮ ಮಾಹಿತಿಗಳು ಇಲ್ಲಿವೆ. ಶ್ರೀಮಠ ನಡೆಸುತ್ತಿರುವ ಸದ್ವಿದ್ಯಾ ಸಂಜೀವಿನೀ ಪಾಠಶಾಲೆ, ಸುರಸರಸ್ವತೀ ಸಭಾ, ಶಂಕರ ಅದ್ವೈತಶೋಧ ಕೇಂದ್ರ, ಶಂಕರ ಕೃಪಾ ಪತ್ರಿಕೆ, ಶ್ರೀ ಭಾರತೀ ತೀರ್ಥ ಪ್ರಸಾದ-ಮೊದಲಾದವುಗಳನ್ನು ಸಮಗ್ರವಾಗಿ ಪರಿಚಯಿಸಿದ್ದಾರೆ. ಇತಿಹಾಸದ ಪುಟಗಳಲ್ಲಿ ಶೃಂಗೇರಿ ಶ್ರೀಶಾರದಾಪೀಠ, ಅದು ನಡೆದು ಬಂದ ದಾರಿ, ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯೊಂದಿಗೆ ಶ್ರೀ ಮಠದ ಸಂಬಂಧ-ಇತ್ಯಾದಿ ಲೇಖನಗಳು ಶ್ರೀಶಾರದಾ ಪೀಠದ ಐತಿಹಾಸಿಕ ಮಹತ್ತ್ವವನ್ನು ತಿಳಿಸುತ್ತವೆ. ಈ ಗ್ರಂಥದ ಕೊನೆಯ ಲೇಖನವಾದ 'ಧಾರ್ಮಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಶೃಂಗೇರಿ ಶ್ರೀ ಶಾರದಾ ಪೀಠದ ಕೊಡುಗೆ' ಜನ-ಸಾಮಾನ್ಯರಿಗೆ ಗೊತ್ತಿಲ್ಲದ ಅನೇಕ ಮಹತ್ತ್ವದ ವಿಚಾರಗಳನ್ನು ಸುಂದರವಾಗಿ ನಿರೂಪಿಸುತ್ತದೆ.

ಭಾರತೀಯ ಸಂಸ್ಕೃತಿ ಮತ್ತು ಸನಾತನ ಹಿಂದೂ ಧರ್ಮದ ಕುರಿತು ಅಭಿಮಾನವುಳ್ಳವರು ಮಾತ್ರವಲ್ಲ, ಜನಸಾಮಾನ್ಯರೂ ಓದಿ ಆನಂದಿಸಬಹುದಾದ ಈ ಪುಸ್ತಕದಲ್ಲಿ ಇಪ್ಪತ್ತೈದಕ್ಕೂ ಹೆಚ್ಚು ವರ್ಣರಂಜಿತ ಚಿತ್ರಗಳಿವೆ. ಅನುಬಂಧದಲ್ಲಿನ ಅನೇಕ ಸ್ತೋತ್ರಗಳು, ಶೃಂಗೇರಿ ಶ್ರೀಶಾರದಾಪೀಠದ ಗುರುಪಂಪರೆ, ಶ್ರೀಮಠದಲ್ಲಿ ನಡೆಯುವ ಉತ್ಸವಗಳು ಮತ್ತು ಆಚರಣೆಗಳು, ಜಗತ್ತಿನಾದ್ಯಂತ ಇರುವ ಶೃಂಗೇರಿ ಶ್ರೀಶಾರದಾ ಪೀಠದ ಶಾಖಾ ಮಠಗಳು ಮತ್ತು ಅಂಗ ಸಂಸ್ಥೆಗಳ ಮಾಹಿತಿಗಳು ಇವೆಲ್ಲ ತುಂಬ ಉಪಯುಕ್ತವಾಗಿದ್ದು, ಈ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿವೆ. ಶೃಂಗೇರಿ ಜಗದ್ಗುರು ಮಹಾಸಂಸ್ಥಾನದ ಆಡಳಿತಾಧಿಕಾರಿ ಪದ್ಮಶ್ರೀ ಡಾ। ವಿ.ಆರ್. ಗೌರಿಶಂಕರ್‌ರವರ ಮುನ್ನುಡಿಯ ಮಾತುಗಳು ತುಂಬ ಅರ್ಥವತ್ತಾಗಿವೆ. ಇದು ಕೇವಲ ಕೊಂಡಾಡಲು ಮಾತ್ರವಲ್ಲ, ಕೊಂಡೋದಲು ಯೋಗ್ಯವಾದ ಉತ್ಕೃಷ್ಟ ಗ್ರಂಥ.


# ನಮ್ಮ ಸಮಾಜದ ಒಂದು ಅಪೂರ್ವ ರತ್ನ ಡಾ। ಭಾರತಿ, ಮರವಂತೆ

ಮಾಹಿತಿ : **ಮ.ನಾ.ಹೆಬ್ಬಾರ**



ವಿವಾಹ, ಬ್ರಹ್ಮೋಪದೇಶಗಳ ಸಂದರ್ಭದಲ್ಲಿ ಮತ್ತು ಹಬ್ಬ ಹರಿದಿನಗಳ ಸಂಭ್ರಮದಲ್ಲಿ ಮನೆಗಳ ಮುಂದೆ ಹಾಗೂ ದೇವಾಲಯಗಳಲ್ಲಿ ರಂಗೋಲಿ ಹಾಕುವುದನ್ನು ನಾವು ನೋಡಬಹುದು. ಆದರೆ ಅದರ ಕಡೆಗೆ ಗಮನ ಹರಿಯಿಸುವ ವ್ಯಕ್ತಿಗಳ ಸಂಖ್ಯೆ ಕಡಿಮೆ. ಮನೆಯ ಎದುರು ಹಾಕಲ್ಪಟ್ಟ ರಂಗೋಲಿಯು ಅತಿಥಿ ಮಹೋದಯರುಗಳ ಆಗಮನದ ಕೆಲವೇ ಹೊತ್ತಿನಲ್ಲಿ ಕಾಲಿನಡಿಯ ಕಸವಾಗಿ ನಾಶವಾಗುತ್ತದೆ. ಆದರೆ ಈ ರಂಗೋಲಿಗೇ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ವಿವಿಧ ವರ್ಣದ ಪುಡಿಗಳಿಂದ ವಿವಿಧ ಬಗೆಯ ರಂಗೋಲಿಗಳನ್ನು ಕಂಡಾಗ ಇದರ ಪ್ರಾಮುಖ್ಯತೆ ನಮಗೆ ತಿಳಿಯುತ್ತದೆ. ನಾಗ ದೇವರ ಪ್ರೀತ್ಯರ್ಥವಾಗಿ ನಡೆಸುವ ನಾಗಮಂಡಲ, ದುರ್ಗಾಪೂಜೆ, ಚಂಡಿಕಾ ಪೂಜೆ ಇತ್ಯಾದಿ ಸಂದರ್ಭಗಳಲ್ಲಿ ಸಂಬಂಧಪಟ್ಟವರು ರಚಿಸುವ 'ಮಂಡಲ' ಇತ್ಯಾದಿಗಳೂ ಈ ರಂಗೋಲಿಗಳ ಸಾಲಿನಲ್ಲಿ ಬರುತ್ತವೆ. ಆದರೆ ರಂಗೋಲಿಯಲ್ಲಿ ಹೊಸ ಹೊಸ ಆವಿಷ್ಕಾರಗಳನ್ನೂ, ಸಂಶೋಧನೆಗಳನ್ನೂ, ಪ್ರಯೋಗಗಳನ್ನೂ ಮಾಡಿ, ಇದರ ಬಗ್ಗೆ ಪ್ರೌಢ ಪ್ರಬಂಧವನ್ನು ಬರೆದು ಡಾಕ್ಟರೇಟ್ ಪದವಿಯನ್ನೂ ಪಡೆಯಲು ಸಾಧ್ಯವೆಂಬುದನ್ನು ಸಾಧಿಸಿ ತೋರಿಸಿದ ಧೀರ ಮಹಿಳೆ ಡಾ। ಭಾರತಿ ಮರವಂತೆ.

ಶ್ರೀಮತಿ ಸುಶೀಲಾ ಮತ್ತು ಶ್ರೀ ಶೇಷಗಿರಿ,



ಮರವಂತೆ ಇವರ ಪುತ್ರಿಯಾದ ಭಾರತಿಯು ಕುಂದಾಪುರ ತಾಲೂಕಿನ ಮರವಂತೆಯವರು. ಬಸ್ರೂರಿನ ಶಾರದಾ ಕಾಲೇಜಿನಲ್ಲಿ ಪದವಿಯನ್ನು ಪಡೆದ ಇವರು ವಿದ್ಯಾರ್ಥಿ ದಿಸೆಯಲ್ಲಿಯೇ ರಂಗೋಲಿ ಮತ್ತು ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿದ್ದವರು. ಕನ್ನಡದಲ್ಲಿ ಸ್ನಾತಕೋತ್ತರ (ಎಂ.ಎ) ಪದವಿ ಪಡೆದ ಇವರು ಪ್ರಸ್ತುತ ಕಾರ್ಕಳದ ಕುಕ್ಕುಂದೂರಿನಲ್ಲಿರುವ ಕಸ್ತೂರ್‌ಬಾ ಡಿ.ಎಡ್. ಕಾಲೇಜಿನಲ್ಲಿ ಉಪನ್ಯಾಸಕಿಯಾಗಿದ್ದಾರೆ. ಪ್ರೊ। ಕನರಾಡಿ ವಾದಿರಾಜ ಭಟ್ಟರು ತನ್ನ ಮಾರ್ಗದರ್ಶಕರೆನ್ನುತ್ತಿದ್ದಾರೆ. ರಂಗೋಲಿ, ಚಿತ್ರಕಲೆ, ಸಾಹಿತ್ಯ, ಸಂಗೀತ, ಲಲಿತ ಕಲೆಗಳಲ್ಲಿ ಆಸಕ್ತಿ ಮತ್ತು ಪರಿಶ್ರಮ ಹೊಂದಿರುವ ಇವರು ರಂಗೋಲಿ ಮತ್ತು ಚಿತ್ರಕಲೆಗಳ ಬಗ್ಗೆಯೇ ನಾಲ್ಕಾರು ಕೃತಿಗಳನ್ನು ಬರೆದು ಪ್ರಕಟಿಸಿದ್ದಾರೆ. 'ರಂಗೋಲಿ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ನಡೆಸುತ್ತಿದ್ದು, ಪ್ರತೀ ಬಾರಿಯೂ ನೂರಾರು ಹೊಸ ಹೊಸ ರಂಗೋಲಿಗಳನ್ನು ರಚಿಸಿ ಮುದ್ರಿಸಿ ಇದರಲ್ಲಿ ಪ್ರಕಟಿಸುತ್ತಿದ್ದಾರೆ. ತರಂಗ, ಪ್ರಜಾವಾಣಿ, ತುಷಾರ, ಅಕ್ಷರ ಸರಸ್ವತಿ, ಮಂಗಳ, ಪ್ರಿಯಾಂಕ ಇತ್ಯಾದಿ ಪತ್ರಿಕೆಗಳಲ್ಲಿ ರಂಗೋಲಿ ಹಾಗೂ ಅಂಕಣಗಳ ಪ್ರಕಟಣೆಗಳಿವೆ. ಕರ್ನಾಟಕದ ಎಂಟಕ್ಕೂ ಹೆಚ್ಚಿನ ಕಡೆಗಳಲ್ಲಿ ಪ್ರಶಸ್ತಿ, ಉಡುಪಿ ಪರ್ಯಾಯ ಶ್ರೀ ಪುತ್ತಿಗೆ ಮಠ ಮತ್ತು ಶ್ರೀಕ್ಷೇತ್ರ ಧರ್ಮಸ್ಥಳದ ಡಾ। ಡಿ. ವೀರೇಂದ್ರ ಹೆಗ್ಗಡೆಯವರು ಸೇರಿದಂತೆ ಕುಂದಾಪುರ, ಉಡುಪಿ ಇತ್ಯಾದಿ ಹದಿನೈದಕ್ಕೂ ಹೆಚ್ಚಿನ ಕಡೆಗಳಲ್ಲಿ ಸನ್ಮಾನ, ರಾಜ್ಯದ ಶಿವಮೊಗ್ಗ, ಗುಲ್ಬರ್ಗ ಸೇರಿದಂತೆ 20 ಕಡೆಗಳಲ್ಲಿ ಚಿತ್ರಕಲಾ ಪ್ರದರ್ಶನ, ಸಂಪನ್ಮೂಲ ವ್ಯಕ್ತಿಯಾಗಿ ಕರ್ನಾಟಕದ 25 ಊರುಗಳಲ್ಲಿ ಪ್ರಾತ್ಯಕ್ಷಿಕೆ-ತರಬೇತಿಗಳ ಮುಖಂಡತ್ವ, ಸಮ್ಮೇಳನ, ಆಕಾಶವಾಣಿ, ದೂರದರ್ಶನ ಸೇರಿದಂತೆ 10 ಕಡೆಗಳಲ್ಲಿ ಸಂದರ್ಶನ-ಹೀಗೆ ಸಾಗಿದೆ ಇವರ ಸಾಧನೆ. ''ಕರಾವಳಿ ಕರ್ನಾಟಕದ ರಂಗೋಲಿ ಕಲೆ'' ಎಂಬ ಇವರ ಪ್ರೌಢಪ್ರಬಂಧಕ್ಕೆ 2010ರ ಮಾರ್ಚ್‌ನಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಲಭಿಸಿರುವುದು ಇವರ ಸಾಧನಾ ಮುಕುಟದ ಯಶಸ್ಸಿನ ಗರಿಯೇ ಸರಿ! ಕನ್ನಡ ಸಾಹಿತ್ಯದಲ್ಲೂ ಕೈಯಾಡಿಸಿರುವ ಇವರು ಬರೆದ ಲಘು ಹರಟೆ, ಇತರ ಲೇಖನಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಪ್ರಗತಿಯ ಹಾದಿಯಲ್ಲಿ ಸಾಗುತ್ತಿರುವ ಡಾ। ಭಾರತಿ, ಮರವಂತೆ ಇವರು ಇನ್ನೂ ಹೆಚ್ಚಿನ ಖ್ಯಾತಿಯನ್ನು ಗಳಿಸುವಂತಾಗಲಿ ಎಂದು ಹಾರೈಸುತ್ತೇವೆ.

# ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ಅಧ್ಯಕ್ಷರಾಗಿ ಎಮ್.ಸದಾನಂದರಾವ್, ಚಿಟ್ಪಾಡಿ

ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ, ಉಡುಪಿ ಇದರ ನೂತನ ಆಡಳಿತ ಮಂಡಳಿಯ ಸಭೆಯು ಇತ್ತೀಚೆಗೆ ಸೊಸೈಟಿಯ ಕಛೇರಿಯಲ್ಲಿ ನಡೆದು ಮುಂದಿನ ಎರಡೂವರೆ ವರ್ಷಗಳಿಗೆ ಅಧ್ಯಕ್ಷರಾಗಿ ಎಮ್.ಸದಾನಂದ ರಾವ್, ಚಿಟ್ಪಾಡಿ ಅವರನ್ನು ಹಾಗೂ ಉಪಾಧ್ಯಕ್ಷರಾಗಿ ಕೆ.ವೇಣುಗೋಪಾಲರಾವ್, ಅಂಬಲ್ಪಾಡಿ ಅವರನ್ನು ಆಯ್ಕೆ ಮಾಡಲಾಯಿತು.

ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ನಿರ್ದೇಶಕರೂ, ಮಾಜಿ ಕೋಶಾಧಿಕಾರಿಯೂ ಚಿಟ್ಪಾಡಿ ರಾಧಾಮಾಧವ ಸ್ಟೋರ್‌ನ ಮಾಲಕರೂ ಆದ ಮಾರ್ಪಳ್ಳಿ ಸದಾನಂದರಾಯರು ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪ್ರಾರಂಭದಿಂದಲೂ ಉಪಾಧ್ಯಕ್ಷರಾಗಿದ್ದು ಕಳೆದ 5 ವರ್ಷದ ಅವಧಿಯಲ್ಲಿ ಅಧ್ಯಕ್ಷರಾಗಿದ್ದ ಇವರು ಮುಂದಿನ ಎರಡೂವರ್ಷಗಳಿಗೆ ಅಧ್ಯಕ್ಷರಾಗಿ ಪುನರಾಯ್ಕೆಯಾದರು. ಉಪಾಧ್ಯಕ್ಷರಾಗಿ ಆಯ್ಕೆಯಾದ ಕೆ.ವೇಣುಗೋಪಾಲರಾವ್, ಅಂಬಲ್ಪಾಡಿ ಅವರು ಸೊಸೈಟಿಯ ಆರಂಭದಿಂದಲೂ ಕಾರ್ಯದರ್ಶಿಯಾಗಿದ್ದು, ನಿವೃತ್ತಿಯ ಬಳಿಕ ಸೊಸೈಟಿಯ ಆಂತರಿಕ ಲೆಕ್ಕಪರಿಶೋಧಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಮಾಜಿ ಕಾರ್ಯದರ್ಶಿ ಯಾಗಿದ್ದ ಇವರು ಪ್ರಸಕ್ತ ಆಡಳಿತ ಮಂಡಳಿಯ ಸದಸ್ಯರಾಗಿದ್ದಾರೆ. ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯ ನಿರ್ದೇಶಕರಾದ ಶ್ರೀಯುತ ಯು.ಪ್ರಫುಲ್ಲಚಂದ್ರರಾವ್, ವೈ.ಮುರಳೀಕೃಷ್ಣ ರಾವ್, ಯು. ಅರವಿಂದ ಕುಮಾರ್, ವೈ. ಪ್ರಕಾಶ ಕುಮಾರ್, ಕೆ. ಮಂಜುನಾಥ ಹೆಬ್ಬಾರ್ ಹಾಗೂ ಶ್ರೀಮತಿ ಗೀತಾ ಕೃಷ್ಣಕುಮಾರ್ ಮಟ್ಟು ಇವರು ಸಭೆಯಲ್ಲಿ ಉಪಸ್ಥಿತರಿದ್ದರು.


**ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಪಾವಂಜೆ**

ಅಂಚೆ : ಹಳೆಯಂಗಡಿ - 574 146, ಮಂಗಳೂರು ತಾಲೂಕು, ದ.ಕ.ಜಿಲ್ಲೆ, ದೂ. : 0824-2283393

ಆತ್ಮೀಯರೇ, ಪಾವಂಜೆ, 16-2-2011

ಸ್ವಸ್ತಿ! ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯವರ್ಯೇತ್ಯಾದಿ ಸಮಸ್ತ ಬಿರುದಾವಲೀ ವಿರಾಜಮಾನರಾದ **ದಕ್ಷಿಣಾಮ್ನಾಯ ಶ್ರೀ ಶಂಗೇರಿ ಶಾರದಾ ಪೀಠಾಧೀಶ್ವರ**

**ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹದಿಂದ**

ಶ್ರೀ ಖರ ನಾಮ ಸಂವತ್ಸರದ ಚೈತ್ರ ಶುದ್ಧ ದಶಮಿಯಿಂದ ವೈಶಾಖ ಬಹುಳ ದ್ವಿತೀಯದ ವರೆಗೆ ದಿನಾಂಕ 13-4-2011ನೇ ಬುಧವಾರದಿಂದ ದಿನಾಂಕ 19-4-2011ನೇ ಮಂಗಳವಾರದ ವರೆಗೆ

**ಶ್ರೀ ಕ್ಷೇತ್ರದಲ್ಲಿ ವರ್ಷಾವಧಿ ಮಹೋತ್ಸವ** ಹಾಗೂ ದಿನಾಂಕ 18-4-2011

**ಮಹಾರಥೋತ್ಸವವು** ನೆರವೇರಲಿದೆ.

ಇತರ ಉತ್ಸವಗಳು ಆಮಂತ್ರಣ ಪತ್ರಿಕೆಯಲ್ಲಿ ನಮೂದಿಸಿದಂತೆ ಜರಗಲಿರುವುದು.

ಈ ಮಹೋತ್ಸವಕ್ಕೆ ತಾವೆಲ್ಲರೂ ಬಂದು ಉತ್ಸವಾದಿಗಳಲ್ಲಿ ಭಾಗವಹಿಸಿ, ಶ್ರೀದೇವರ ಗಂಧ-ಪ್ರಸಾದವನ್ನು ಸ್ವೀಕರಿಸಿ, ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

**ಡಾ। ಯಾಜಿ ಎಚ್. ನಿರಂಜನ ಭಟ್ಟ** — ಧರ್ಮದರ್ಶಿಗಳು

**ಎಂ. ಶಶೀಂದ್ರ, ಕುಮಾರ** — ಆಡಳಿತ ಮೊಕ್ತೇಸರರು

**ಎರ್ಮಾಳು ರಾಮಚಂದ್ರ, ರಾವ್, ಎಸ್.ಸದಾನಂದ ರಾವ್,**

**ಸ್ಕಂದಸ್ವಾಮಿ ಮುಕ್ಕ**

ಮೊಕ್ತೇಸರರು

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

ಪಶ್ಚಿಮ ಕರಾವಳಿಯು ಪರಶುರಾಮ ಕ್ಷೇತ್ರೇ ಎಂದು ಸಂಬೋಧಿಸಲ್ಪಟ್ಟಿದೆ. ಇದು ಸನತ್ಕುಮಾರ ಸಂಹಿತೆ ಹಾಗೂ ಬ್ರಹ್ಮಾಂಡ ಪುರಾಣಗಳಲ್ಲಿ ಉಲ್ಲೇಖಿತವಾದ ಪರಶುರಾಮ ಸೃಷ್ಟಿಯೇ ಆಗಿರಬೇಕೆಂಬುದು ನಿಶ್ಚಿತ. ಪರಶುರಾಮನ ಕಾಲವು ಸಾಧಾರಣ ತ್ರೇತಾಯುಗದಲ್ಲಿರಬೇಕು. ಈ ಪರಶುರಾಮನಿಗೂ ಈಗಿನ ಬ್ರಾಹ್ಮಣರಿಗೂ ಏನು ಸಂಬಂಧವೆಂದು ತಿಳಿಯುವುದಿಲ್ಲ. ಹಾಗಿದ್ದರೂ ಸ್ಥಳವಂದಿಕರಾದ ಸ್ಥಾನಿಕರೇ ಆ ಕಾಲದ ಇಲ್ಲಿಯ ಬ್ರಾಹ್ಮಣರಿರಬೇಕು. ಈ ಮೊದಲೇ ಕೂಲಂಕಷ ವಿಮರ್ಶೆ ಮಾಡಿದಂತೆ ಹೊಸತಾಗಿ ಬಂದ ಬ್ರಾಹ್ಮಣರು ಪ್ರಾದುರ್ಭಾವಕ್ಕೆ ಬಂದ ನಂತರ ತಮ್ಮ ಸ್ಥಾನವನ್ನು ಸ್ಥಿರಮಾಡಲಿಕ್ಕಾಗಲೀ, ಯೋಗ್ಯತೆ, ಖ್ಯಾತಿಗಳನ್ನು ಹೆಚ್ಚಿಸುವುದಕ್ಕಾಗಲೀ ಬೇರೆ ಬೇರೆ ನಮೂನೆಯ ಕತೆಗಳನ್ನು ಕಟ್ಟಿದಂತೆ ಕಂಡು ಬರುತ್ತದೆ.

ನಮ್ಮ ನಾಡಿನಲ್ಲಿ ಸ್ಥಾನಿಕರು ಅಪಾಂಙ್ಕ್ತೆಯರಾಗಲು ಅವರು ತ್ಯಾಜ್ಯವಾದ ಶಿವ ನಿರ್ಮಾಲ್ಯವನ್ನು ಸೇವಿಸುವುದರಿಂದಾಗಿದೆ ಎಂಬ ಅಭಿಪ್ರಾಯವೂ ಇದೆ. ಪಾಂಚರಾತ್ರ ಆಗಮ ರೀತಿಯಲ್ಲಿ ಶಿವನಿರ್ಮಾಲ್ಯ ನಿಷಿದ್ಧವಾದರೂ, ಸ್ಮಾರ್ತಸಂಪ್ರದಾಯದಲ್ಲಿ ಈ ನಿಷೇಧ ಇಲ್ಲ. ಉದಾ : ಅಥ ಶಿವ ನಿರ್ಮಾಲ್ಯ ಗ್ರಾಹ್ಯಂ (ಬೃಹಜ್ಜಾಬಾಲೊನಿಪಷದ್)

ರುದ್ರಭುಕ್ತಂ ತು ಭುಂಜಿಯಾತ್ ।
ರುದ್ರಪೀತಂ ಪಿಬೇತ್ ।
ರುದ್ರಘ್ರಾತಂ ಜಿಘ್ರೇತ್ ।
ರುದ್ರೇಣ ಪೀತಂ ಪಿಬೇತಿ ।
ತಸ್ಮಾತ್ ನಿರ್ಮಾಲ್ಯಮೇವ ಭಕ್ಷಯಿತ ।
ನಿರ್ಮಾಲ್ಯಮೇವ ನಿಶೇವೇತ ॥
ಬಾಣಲಿಂಗೇ ಚ ಲೌಹೇಚ ।
ಸಿದ್ಧಲಿಂಗೇ ಸ್ವಯಂಭುವಿ ।
ಪ್ರತಿಮಾಸು ಚ ಸರ್ಪಾಸು ।
ನ ದೋಷೋ ಮಾಲ್ಯಧಾರಣೇ ॥
ದ್ರವ್ಯಮನ್ಯಫಲಂ ತೋಯಂ ।
ಶಿವಸ್ವಂ ನ ಕ್ಷಚಿತ್ ಸ್ಪೃಶೇತ್ ।
ನಿರ್ಮಲತ್ವಾಚ್ಛ (ನಿರ್ಮಾಲ್ಯ)ನೃಣಾಂ
ನೈರ್ಮಲ್ಯ ಕಾರಣಾತ್ ।
ತಿಲಶೋಡಷ ಭಾಗಂಚ ।
ತೃಣಾಗ್ನ ಅಂಬುಕಣೋಪಮಂ ।
ಪಾದೋದಕಪ್ರಸಾದಾನ್ನ ।
ಸಂಪ್ರಣ್ಣನ್ ಮೋಕ್ಷಮಾಪ್ನುಯಾತ್ ।
ಲಿಂಗೇ ಸ್ವಯಂ ಭವೇ ಬಾಣೇ ।
ರತ್ನ ಜೇ ರಸನಿರ್ಮಿತೇ ।
ಸಿದ್ಧ ಪ್ರತಿಷ್ಠಿತೇ ।
ತಾಮ್ರ, ರೌಪ್ಯ, ಕಾಂಚನಲೋಹಜೇ ।
ಪ್ರತಿಮಾಸ ಚ ಸರ್ವಾಸು ।
ನ ಚಂಡಿಧಿಕೃತಿರ್ಭವೇತ್ ।
ಚಂಡಾದಿಕಾರೋ ನೋ ಯತ್ರ
ಭೋಕ್ತವ್ಯಂ ತತ್ರಭಕ್ತಿತಃ ।

ಸ್ಮಾರ್ತ ಸಂಪ್ರದಾಯವನ್ನವಲಂಬಿಸಿ ಹೊರಟಿರುವ ಮೇಲಿನ ಪ್ರಮಾಣದ ಮೇರೆಗೆ ಶಿವ ನಿರ್ಮಾಲ್ಯ ತ್ಯಾಜ್ಯವೆಂಬುದು ಈ ಸಂಪ್ರದಾಯಕ್ಕೆ ಸಮ್ಮತವಲ್ಲ. ಕಡುವೈಷ್ಣವ ಧರ್ಮ ಪ್ರಕಾರ ವಿಷ್ಣು ವಿರಹಿತ ಶಿವ ಆರಾಧನೆ ನಿಷೇಧಿಸಲ್ಪಡುತ್ತದೆ. ಆಗಮೋಕ್ತ ಶಿವಾಲಯಗಳಲ್ಲಿ ಸಾಲಿಗ್ರಾಮವಿಟ್ಟು ಪೂಜೆ ಮಾಡುವುದು ಮೇಲೆ ಹೇಳಿದ ನಿಷೇಧದ ಬಾಧೆಯ ಪರಿಹಾರಕ್ಕಾಗಿ ರೂಢಿಗೆ ಬಂದ ಸಂಪ್ರದಾಯ. ನೈವೇದ್ಯವನ್ನು ಶಿವನಿಗೆ ಸಮರ್ಪಿಸಬೇಕೇ ವಿನಹ ಶಾಲಿಗ್ರಾಮಕ್ಕೇ ಮೊದಲು ಸಮರ್ಪಿಸುವ ವಿಧಾನ ಆಗಮೋಕ್ತ ಶಿವಾಲಯಗಳಿಗೆ ಒಪ್ಪುವ ಕಾರ್ಯವಲ್ಲವೆಂಬುದು ಸ್ಥಳ ಸಂಪ್ರದಾಯವಾದಿಗಳ ದೃಷ್ಟಿಗೆ ಸರಿಹೋದೀತು. ಸ್ಥಳದ ರಿವಾಜು ಏನೇ ಇರಲಿ, ಪೂಜೆ ಮಾಡುವ ಅರ್ಚಕರು ತನ್ನ ಕುಲಸಂಪ್ರದಾಯಕ್ಕನುಸಾರವಾಗಿ ಪೂಜೆ ನಡೆಸುವುದು ಶ್ರೇಯಸ್ಕರ ಎಂಬುದು ಕುಲಸಂಪ್ರದಾಯವಾದಿಗಳ ದೃಷ್ಟಿಗೆ ಸರಿಹೋದೀತು. ಈ ಚರ್ಚೆಯ ನಿರ್ಣಯ ಹೇಗೂ ಇರಲಿ, ಶಿವ-ವಿಷ್ಣು ಎಂಬ ಹೆಸರಿನ ಎರಡು ದೇವತಾ ಶಕ್ತಿಗಳೊಳಗಿನ ಭೇದ ಹಾಗೂ ತಾರತಮ್ಯವನ್ನು ನಿಮಿತ್ತವಾಗಿಟ್ಟುಕೊಂಡು ಈ ಚರ್ಚೆ ಬೆಳೆದಂತಿದೆ. ಈ ಭೇದದ ಸ್ವರೂಪ ನಿರ್ವಚನ ಶಾಸ್ತ್ರ ಬಲ್ಲವರ ಪಾಲಿಗೆ ಸೇರಿದ ಕಾರ್ಯ. ಪ್ರಸುತ್ತ, ಶೈವ-ವೈಷ್ಣವ ಎಂಬ ಎರಡು ಪಂಗಡಗಳೊಳಗಣ ಚಾರಿತ್ರಿಕ ಭಿನ್ನಭಾವಕ್ಕೂ ವಿಷ್ಣು ಶಿವರನ್ನು ಸಂಬಂಧಿಸಿದ ಶಾಸ್ತ್ರೀಯ ವಿಚಾರಗಳಿಗೂ ಪರಸ್ಪರ ಸಂಬಂಧವನ್ನು ಕಲ್ಪಿಸಬೇಕೇ? ಎಂಬುದನ್ನು ಇಲ್ಲಿ ನಿಶ್ಚಯಿಸಿಕೊಳ್ಳಬೇಕು. ಪ್ರಾಯಶಃ ಈ ರೀತಿಯ ಸಂಬಂಧವನ್ನು ನಾವು ಕಲ್ಪಿಸಿಕೊಳ್ಳಲಾಗಿಲ್ಲ. ಯಾಕೆಂದರೆ ಶಾಸ್ತ್ರೀಯ ದೃಷ್ಟಿಕೋನಕ್ಕೆ ವಿಷ್ಣು-ಶಿವ ಇವರೊಳಗೆ ಭೇದ ಕಂಡರೂ, ಅವರೊಳಗೆ ಪರಸ್ಪರ ವಿರೋಧ ಕಾಣಲಾರದು. ''ಶೈವ-ವೈಷ್ಣವ'' ಎಂಬ ವಿವಾದವನ್ನೊಳಗೊಂಡ ಇತಿಹಾಸದಲ್ಲಾದರೋ ದ್ವೇಷವಿರೋಧಗಳದ್ದೇ ಮೇಲುಗೈಯಾದಂತಿದೆ. ಇತಿಹಾಸಕ್ಕೆ ಸಂಬಂಧಿಸಿದ ಈ ಚರ್ಚೆಯನ್ನು ಇತಿಹಾಸದ ಯಥಾರ್ಥಜ್ಞಾನದ ನೆರವಿನಿಂದಲೇ ನೀಗಿಸುವುದು ಪ್ರಾಮಾಣಿಕ ಮಾರ್ಗವಷ್ಟೆ?

**ಶಾಸನಾದಿಗಳಲ್ಲಿ ಸ್ಥಾನಿಕರು :**

ವಿಮರ್ಶೆಯ ಬಗ್ಗೆ ಹಾಗೂ ವಿಚಾರಕ್ಕೆ ಈ ಕೆಳಗಿನ ಶಾಸನಗಳ ಅಭಿಪ್ರಾಯವನ್ನು ಸ್ಥಾನಿಕರು ಚಾರಿತ್ರಿಕವಾಗಿ ಯಾವ ಸ್ಥಾನಮಾನಗಳನ್ನು ಹೊಂದಿದ್ದರು ಎಂಬುದನ್ನು ತಿಳಿಯುವುದಕ್ಕೋಸ್ಕರ ಕೊಟ್ಟಿದ್ದೇನೆ.

1. ವಿನೀತಾತ್ಮಚಾರ್ಯರ ಶಿಷ್ಯ ಕೋಳೂರು ನಖಾರೇಶ್ವರ ದೇವಳದ ಅರ್ಚಕ ಪರಮೇಶ್ವರ ಸಾಂದೇವ ಸಾಂತಿಗ (ಕಿ.ಶ.815 ಸಾಂತಿಗವೆಂಬುದು ಸ್ಥಾನಿಕದ ಅಪೂರ್ವ ಪ್ರಭೇದವೆಂದು ಪರಿಗಣಿಸಲ್ಪಟ್ಟಿದೆ.)

2. ಕರುವೂರು ಶಹರಿನ ವಿಶ್ವಾಮಿತ್ರ ಗೋತ್ರಕ್ಕೆ ಸೇರಿದ ಸ್ಥಾನಿಕ ಮಧುರವಜ (ಗಂಗ ಅರಸನಾದ ರಾಚಮಲ್ಲನ ಕ್ರಿ.ಶ.828ರ ತಾಮ್ರ ಶಾಸನವನ್ನು ಬರೆದಾತ)

3. ಅವನಿ ದೇಶದ ನೊಲಂಬ ಅರಸು ಮನೆತನಕ್ಕೆ ಸೇರಿದ ದಿಲೀಪ ಇರಿವನೊಲಂಬನ ಕಾಲದ ಒಂಭತ್ತು ಶಾಸನಗಳಲ್ಲಿ ಸ್ಥಾನಿಕ ತ್ರಿಭುವನ ಕರ್ತಾರಭಟ್ಟಾರರು ಪ್ರಖ್ಯಾತಿ ಹೊಂದಿದ್ದರು. (ಕ್ರಿ.ಶ.970-ಕ್ರಿ.ಶ.1007)

4. ಕ್ರಿ.ಶ. 891ರಿಂದ ಕ್ರಿ.ಶ.931ರ ವರೆಗೆ ಸ್ಥಾನಾಚಾರ್ಯ ತ್ರಿಭುವನ ಕರ್ತಾರ ಭಟ್ಟಾರರು ಧಾರ್ಮಿಕ ಕ್ಷೇತ್ರದಲ್ಲಿ ಪ್ರಮುಖರಾಗಿದ್ದ ಸಂಗತಿ ತಿಳಿದು ಬರುತ್ತದೆ.

5. ಕೋಲಾರ ಜಿಲ್ಲೆಯ ಕುರುಡಮಲೆ ಸೀಮೆಯ ಹತ್ತನೆಯ ಶತಮಾನದ್ದೆಂದು ತಿಳಿಯಲ್ಪಟ್ಟ ಶಿಲಾಲೇಖದಲ್ಲಿ ಸಂಗಮೇಶ್ವರ ದೇವಸ್ಥಾನದ ಅಧಿಕಾರಿಯಾಗಿದ್ದು ಖಾಯದತ್ತವಾಗಿ ಕರಪನ ಹಳ್ಳಿ ಎಂಬ ಗ್ರಾಮವನ್ನು ಸ್ವೀಕರಿಸಿದ ಸ್ಥಾನಿಕ ಕಣ್ಣಪ್ಪ.

6. ಸೊರಬ ತಾಲೂಕಿನ ಕುಪ್ಪೆತ್ತೂರ ಅಗ್ರಹಾರದಲ್ಲಿಯ 77 ದೇವಸ್ಥಾನಗಳ ಧರ್ಮಗುರುವಾಗಿದ್ದ ರಾಜಗುರು ಎಕ್ಕೋಟಿ ಸಮಯ ಚಕ್ರವರ್ತಿ ಸಪ್ತಾಹತ್ತರಿ ಸ್ಥಾನಚಾರ್ಯ ಸರ್ವೇಶ್ವರ ಶಕ್ತಿ ದೇವ.

7. ಕುಪ್ಪೆತ್ತೂರು ಕೋಟೇಶ್ವರ ಮೂಲಸ್ಥಾನ ದೇಗುಲದ ಮತ್ತಿತರ 18 ದೇವಾಲಯಗಳ ಅರ್ಚಕರನ್ನು ಕ್ರಿ.ಶ,.1077ರಲ್ಲಿ 'ಕೋಟೇಶ್ವರ ಮೂಲಸ್ಥಾನ ಪ್ರಮುಖ ಪದಿನೆಂಟು ಸ್ಥಾನದ ಆಚಾರ್ಯರುಂ' ಎಂದು ಉಲ್ಲೇಖಿಸಿದೆ.

8. ರಾಷ್ಟ್ರಕೂಟರ ಪ್ರಭುತ್ವದ ಕಾಲದ ಕ್ರಿ.ಶ. 1107ರ ಶಾಸನದಲ್ಲಿ ''ಸರ್ವಭಾದಾಪರಿಹಾರಂ ಆಗಿ ಸಕಲ ಸ್ಥಾನೀಗರುಂ ಗಂಡ ಮಾಡದವರ ಹದನವರಿಯಲು ಬಿಟ್ಟಧರ್ಮ'' ಎಂದಿರುವ ಉಲ್ಲೇಖವು ಪ್ರಾಮುಖ್ಯವಾಗಿದೆ.

9. ಕ್ರಿ.ಶ. 1129ರಲ್ಲಿ ಭೂದಾನವನ್ನು ಮಾಡಿದ ಹಳೆ ಸೊರಬದ ರಾಮೇಶ್ವರ ದೇವಸ್ಥಾನದ ಶಾಸನದಲ್ಲಿ ಸ್ಥಾನಿಕ ಬೊಪ್ಪಯ್ಯಜೀಯನು ಆ ಶಾಸನವನ್ನು ಕೆತ್ತಿದವನೆಂದಿದೆ.

10. ಬಕನ ಹಳ್ಳಿಯಲ್ಲಿ ಮಲ್ಲೇದೇವರ ಗುಡಿಶಿಲಾ ಶಾಸನದಲ್ಲಿ (ಕ್ರಿ.ಶ.1139) ಹೊಯ್ಸಳ ಅರಸನಾದ ತ್ರಿಭುವನ ಮಲ್ಲ ವಿಷ್ಣುವರ್ಧನ ಅರಸನ ಕಾಲದಲ್ಲಿ ಎರೆಯಮ ಸೆಟ್ಟಿಯು ತನ್ನ ದೇವರಿಗೆ ದತ್ತವಾಗಷಿ ಕೊಟ್ಟ ಭೂಮಿಯನ್ನು ಸ್ಥಾನಿಕ ತತ್ವಪಥ ಪಂಡಿತನ ಅಧಿಕಾರದಲ್ಲಿ ಇರಿಸಿದನು.

11. ಕ್ರಿ.ಶ.1153ರ ಸುಮಾರಿಗೆ ಅನ್ವಯಿಸುವ ಶಾಸನದ ಪ್ರಕಾರ ಏಳು ಪೇಟೆಗಳ ಮತ್ತು ಐದು ಮಠಗಳ ಸ್ಥಾನಪತಿಯಾಗಿ ಪದ್ಮದೇವ ಗೆಂಗಣ್ಣ ಎಂದು ಕಂಡು ಬರುತ್ತದೆ. (ತಲಕಾಡು ರಾಜರಾಜಪುರಂ) ಅಂತೆಯೇ ತಲಕಾಡಿನ ಕೇದಾರಂ ಕೊಂಡೇಶ್ವರ ದೇವಸ್ಥಾನದ ಸ್ಥಾನಪತಿಗಳು ಎಂಬುದಾಗಿ ಕ್ರಿ.ಶ.1153ರಲ್ಲಿ ಲೇಖನದಲ್ಲಿ ಕಂಡು ಬರುತ್ತದೆ.

12. ಬೇಲೂರಿನ ಕೇಶವ ದೇವಸ್ಥಾನದಲ್ಲಿ ದೊರಕಿದ ಕ್ರಿ.ಶ.1174ರ ಶಾಸನ ಪ್ರಕಾರ ತೇಜೋನಿಧಿ ಪಂಡಿತರ್ಗೆ ಸ್ಥಾನಮಂ ಧಾರಾ ಪೂರ್ವಕಂ ಬಿಟ್ಟ ಬೋವಂ ಕೊಟ್ಟಂ ಎಂದಿದೆ.

(ಮುಂದುವರಿಯುವುದು)

# ನಮಗೊಂದು ಹುಡುಗಿ ಬೇಕು

- ಬಿ. ನಾರಾಯಣ
ವಾದಿರಾಜ ಅಡ್ಡರಸ್ತೆ, ಉಡುಪಿ

ಇಂದಿನ ದಿನಗಳಲ್ಲಿ ಸಭೆ ಸಮಾರಂಭಗಳಲ್ಲಿ ಸಮಾಜ ಬಾಂಧವರು ಬಹುಸಂಖ್ಯೆಯಲ್ಲಿ ಸೇರುವಾಗ ಕೆಲವರಾದರೂ ನಮಗೊಂದು ಹುಡುಗಿಬೇಕು, ನಿಮ್ಮ ತಿಳಿವಳಿಕೆಯಲ್ಲೇನಾದರೂ ಇದೆಯೇ? ಎಂದು ಹೇಳುತಾ, ತಮ್ಮ ಬಳಿಯಿರುವ ವರಮಹಾಶಯನ ವಿವರಗಳನ್ನು ನೀಡುತಾ ಇದಕ್ಕೊಪ್ಪುವ ಹೆಣ್ಣಿದ್ದರೆ ತಿಳಿಸಿ ಎಂದು ಕೇಳಿಕೊಳ್ಳುವುದು ನೆರೆದವರ ಕಿವಿಗಳಿಗೆ ಕೇಳುತ್ತಿರುವುದು ಸಾಮಾನ್ಯ ಸಂಗತಿ.

ಸಂಘಜೀವಿಯಾದ ಮಾನವ ಬದುಕಿನ ಸುಖಕ್ಕೋಸ್ಕರ ಕುಟುಂಬ ಜೀವನ ಪದ್ಧತಿಯನ್ನೂ, ಸಾಮಾಜಿಕ ಜವಾಬ್ದಾರಿಗಳನ್ನೂ ಒಪ್ಪಿಕೊಂಡ ನಂತರ, ಸಾಮಾಜಿಕ ಸ್ವಾರ್ಥಕ್ಕೋಸ್ಕರವೇ ವಿವಾಹ ಪದ್ಧತಿಯು ಜಾರಿಗೆ ಬಂತು. ಪುರಾಣ ಕಾಲದಿಂದಲೂ ಈ ಬಗ್ಗೆ ಹಲವು ವಿಧಿ ವಿಧಾನಗಳನ್ನು ವಿವರಿಸಿರುತ್ತಾರೆ. ರಾಜಮನೆತನಗಳಲ್ಲಿ ಬಹಿರಂಗ ಪೌರುಷ ಪ್ರದರ್ಶನದ ಸ್ವಯಂವರ ಪದ್ಧತಿಯು ಯಾರಿಗೂ ತಿಳಿಯದೆ ನಡೆಯುವ ಗಾಂಧರ್ವ ವಿವಾಹದ ಹಲವಾರು ಕತೆಗಳನ್ನು ಕೇಳಿದ್ದೇವೆ. ರಾಜನು ಬಹುವಲ್ಲಭ ನೆಂಬ ಬಿರುದಾಂಕಿತನಾಗಿದ್ದನು. ಅವನ ಮಡದಿಯರ ಸಂಖ್ಯೆಗೆ ಮಿತಿ ಹಾಕಿಲ್ಲ. ಇನ್ನು ಕೆಲವರು ತಾನು ಬಯಸಿದ ಹುಡುಗಿ, ತನಗೆ ಸಿಗಲೇ ಬೇಕೆಂದಿದ್ದರೆ ನ್ಯಾಯಯುತವಾಗಿ ಪಡೆಯಲು ಸಾಧ್ಯವಿಲ್ಲದಿದ್ದರೆ, ರಾಕ್ಷಸ ವಿವಾಹ ಪದ್ಧತಿಯಿಂದ ವಿವಾಹವಾಗುವ ಕ್ರಮವೂ ಇತ್ತು.

ವಿವಾಹ ಸಮಾರಂಭ ಏರ್ಪಡಿಸಲು ವರ ಮತ್ತು ವಧುವಿನ ಅವಶ್ಯಕತೆಯಿದೆ. ಸುಮಾರು 20ನೇ ಶತಮಾನದ ಅಂತ್ಯದವರೆಗೆ ವರಾನ್ವೇಷಣೆಯೇ ಕೇಳಿ ಬರುತ್ತಿದ್ದ ಮಾತಾಗಿತ್ತು. ಕನ್ಯಾಪಿತೃಗಳು ತಮ್ಮ ಮಗಳಿಗೆ ಅನುರೂಪವರನಿಗೋಸ್ಕರ ಅಲೆದಾಡುತ್ತಿದ್ದರು.

ಸುಮಾರು ಐವತ್ತು ವರ್ಷಗಳಿಗೂ ಮೇಲ್ಪಟ್ಟು ವಿವಾಹಗಳನ್ನು ನೋಡುತ್ತಿರುವ ನನಗೆ ಕಂಡುಬಂದ ವಿಚಾರಗಳು ಇವು. ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಬಾಲ್ಯ ವಿವಾಹವೂ ಇತ್ತು. ನಾಟಕದ ಪಾತ್ರಧಾರಿಗಳಂತೆ ಹುಡುಗ, ಹುಡುಗಿಯರು ಹಿರಿಯರು ಹೇಳಿದಂತೆ ಸಪ್ತಪದಿ ತುಳಿಯುತ್ತಿದ್ದರು.

ಬಳಿಕ ಹುಡುಗ ಪ್ರಾಯ ಪ್ರಬುದ್ಧನಾದಾಗ ಅವನಿಗೆ ಮದುವೆ ಮಾಡಲೇಬೇಕೆಂಬ ಅಭಿಪ್ರಾಯ ಸಮಾಜದಲ್ಲಿತ್ತು. ವಿವಾಹದ ನಂತರ ಸಂಸಾರ ಜವಾಬ್ದಾರಿಯನ್ನು ಹೊರುವ ಸಾಮರ್ಥ್ಯ, ಹೆಂಡತಿ ಮಕ್ಕಳನ್ನು ಪೊರೆಯುವಷ್ಟು ಸಂಪಾದನೆ ಇದೆಯೇ ಎಂಬ ವಿಮರ್ಶೆಗಳಿಲ್ಲ. ನೀರಿಗಿಳಿಯದೆ ಈಜು ಕಲಿಯಲಾಗುವುದಿಲ್ಲವೆಂಬಂತೆ ಸಂಸಾರಿಯಾಗದೆ ಜೀವನ ನಿರ್ವಹಣೆಯ ವಿಚಾರ ತಿಳಿಯುವುದಿಲ್ಲ. ತನ್ನಿಂತಾನಾಗಿಯೇ ಜವಾಬ್ದಾರಿ ಕಲಿತು ಬಾಳಿದವರು ಸಮಾಜದ ಮನ್ನಣೆಗೆ ಪಾತ್ರರಾಗುತ್ತಾರೆ. ಉಳಿದವರು ಈಜು ಕಲಿಯಲಾಗದೇ ಕೈಕಾಲು ಬಡಿಯುತ್ತಿರುವವರಂತೆ ಪರದಾಡುತ್ತಿರುತ್ತಾರೆ. ಬೇರೆಯವರು ಕೈಹಿಡಿದು ನಡೆಸಿದರೆ, ಮಾರ್ಗದರ್ಶನ ನೀಡಿದರೆ ಬದುಕುವ ಆಸೆಯನ್ನು ಜೀವಂತವಾಗಿಟ್ಟುಕೊಂಡು ಸಂಸಾರ ನಿರ್ವಹಣೆ ಮಾಡುತ್ತಾರೆ ಎಂಬುದೇ ಅಂದಿನ ಚಿಂತನೆಯಾಗಿತ್ತು.

ಯುವಕರು ಹೆಚ್ಚೆಚ್ಚು ವಿದ್ಯಾವಂತರಾಗುತ್ತಾ ನಗರ ಪ್ರದೇಶಗಳಲ್ಲಿ ಉದ್ಯೋಗವನ್ನು ಪಡೆಯುತ್ತಾ ಸುಖ ಜೀವನಕ್ಕೆ ಸಮರ್ಥರಾಗುವ ಕಾಲ ಬರಲಾರಂಭಿಸಿದಾಗ ಅಂಥವರಗಳ ಹಿಂದೆ ಹತ್ತಾರು ಕನ್ಯಾಪಿತೃಗಳು ಸುತ್ತಾಡಿ ತಮ್ಮ ಅಳಿಯನನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುವುದು ಸಾಮಾನ್ಯವಾಗಿತ್ತು. ಹೆಣ್ಣು ಮಕ್ಕಳು ಹೆಚ್ಚು ಜನ ವಿದ್ಯಾವಂತರಾಗುತ್ತಿರಲಿಲ್ಲ. ಅಥವಾ ಉದ್ಯೋಗದ ಬೆನ್ನು ಹತ್ತಿ ಹೋಗುತ್ತಿರಲಿಲ್ಲ. ಅವರ ಮುಂದಿನ ಜೀವನದ ಭದ್ರತೆಗೆ ವಿವಾಹವೆಂಬುದು ಅನಿವಾರ್ಯವೆಂಬುದು ಹೆತ್ತವರ ನಿರ್ಧಾರ ಹಾಗೂ ಅದು ಅಂದಿನ ಅವಶ್ಯಕತೆಯೂ ಹೌದು. ಆದುದರಿಂದ ಸಾಧ್ಯವಾದಷ್ಟು ಉತ್ತಮ ಸಂಪಾದನೆ, ಉದ್ಯೋಗ ಇರುವ ವರನನ್ನೇ ಆಯ್ಕೆ ಮಾಡಿ ಮಾಡುವ ಪ್ರಯತ್ನ ಮಾಡಿದರೂ, 2-3 ವರ್ಷ ಈ ಪ್ರಯತ್ನದಲ್ಲಿ ಯಶಸ್ವಿಯಾಗದಿದ್ದಾಗ ಕೃಷಿ, ಸಣ್ಣ ಉದ್ದಿಮೆ, ಇತ್ಯಾದಿ ಇರುವ ವರರ ಕಡೆಗೆ ಗಮನ ಹರಿಸಿ, ಅದೂ ಸಾಧ್ಯವಾಗದಾಗ ಯಾವನೇ ವರನಿಗಾದರೂ ಕೊಟ್ಟು ವಿವಾಹ ಮಾಡಿ ತಮ್ಮ ಜವಾಬ್ದಾರಿ ಕಳೆಯಿತೆಂದು ನಿರಾಳರಾಗುತ್ತಿದ್ದರು. ಅಂದು ಹುಡುಗಿಯರ ವಿವಾಹ ಸಮಾಜದಲ್ಲಿ ಅನಿವಾರ್ಯ.

ಇಪ್ಪತ್ತೊಂದನೇ ಶತಮಾನಕ್ಕೆ ಕಾಲಿರಿಸಿದಂತೇ ಹೆಚ್ಚು ಹೆಣ್ಣು ಮಕ್ಕಳು ವಿದ್ಯಾವಂತರಾಗಿ ಉತ್ತಮ ಉದ್ಯೋಗಗಳನ್ನು ಪಡೆದು, ಉನ್ನತ ಮಟ್ಟದ ಜೀವನವನ್ನು ನಡೆಸಲು ಸಮರ್ಥರಾದರು. ಅವರು ತಮ್ಮ ಜೀವನದ ಸಂಗಾತಿಯನ್ನು ಆಯುವ ನಿರ್ಧಾರವನ್ನು ಹೆತ್ತವರಿಗೆ ಬಿಡುವುದಿಲ್ಲ, ತಮಗೆ ಅನುರೂಪನಾದ, ಅನುಕೂಲನಾದ ವರ ಸಿಕ್ಕಿದರೆ ವಿವಾಹವಾಗುವೆನು ಇಲ್ಲವಾದರೆ ವಿವಾಹವೇ ಬೇಡವೆಂಬ ನಿರ್ಧಾರಕ್ಕೆ ಬರುತ್ತಿದ್ದಾರೆ.

ಕಡಮೆ ವಿದ್ಯಾವಂತ ಮತ್ತು ಕಡಮೆ ವರಮಾನ ತರುತ್ತಿರುವ ಉದ್ಯೋಗ ಮಾಡುತ್ತಿರುವ ಹೆಣ್ಣು ಮಕ್ಕಳೂ ತಮಗೆ ನಗರ ಪ್ರದೇಶದಲ್ಲಿರುವ ಉತ್ತಮ ಸಂಪಾದನೆ ಮಾಡುತ್ತಿರುವ ವರನೇ ಬೇಕೆಂದು ಆಲೋಚಿಸಲು ತೊಡಗಿದರು. ಮದುವೆಯೇ ಜೀವನದ ಪರಮಗುರಿಯಲ್ಲ, ನಾವು ವಿವಾಹವಿಲ್ಲದೆಯೇ ಬದುಕಬಲ್ಲೆವೆಂಬ ಚಿಂತನೆ ಕೂಡಾ ಆರಂಭವಾಯಿತು.

ನಿಯಮಿತವಾದ ಸಂಪಾದನೆ, ಭದ್ರತೆಯಿಲ್ಲದ ಕೃಷಿ, ಸಣ್ಣ ಉದ್ದಿಮೆ ಮಾಡಿಕೊಂಡಿದ್ದು ವೃದ್ಧಾಪ್ಯಕ್ಕೆ ನಿವೃತ್ತಿವೇತನ ಮತ್ತಿತರ ಸೌಲಭ್ಯಗಳಿಲ್ಲದ ವರಮಹಾಶಯರೆನ್ನು ವಿವಾಹವಾಗಲು ಈಗಿನ ಯುವತಿಯರನೇಕರು ಅಪೇಕ್ಷಿಸುವುದಿಲ್ಲ.

ಜನಗಣತಿ ಪ್ರಕಾರ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಇದೆ. ಆದುದರಿಂದ ವರಗಳ ಬರವಿದೆ ಎಂಬುದೊಂದು ವಾದವೂ ಸ್ವಲ್ಪ ಮಟ್ಟಿಗೆ ಸರಿ. ಆದರೆ ಇಂದಿನ ಕಾಲದಲ್ಲಿ ಹುಡುಗಿಯರಿಗೆ ಹಿಂದಿನಂತೆ ಸಮಾಜದಲ್ಲಿ ಬದುಕಲು ಮದುವೆಯುಂಬುದೊಂದು ಅನಿವಾರ್ಯತೆಯಲ್ಲ. ಎರಡನೆಯದಾಗಿ ಅವಶ್ಯಕತೆಯೂ ಅಲ್ಲ. ಅನಿವಾರ್ಯತೆ ಎಂದರೆ ಜೀವನ ನಿರ್ವಹಣೆಗೆ ಬೇಕಾದ ಸಂಪಾದನೆ. ಇಂದಿನ ದಿನಗಳಲ್ಲಿ ನಿರುದ್ಯೋಗ ಸಮಸ್ಯೆ ಹೆಣ್ಣುಮಕ್ಕಳಿಗಿಂತ ಗಂಡು ಮಕ್ಕಳಲ್ಲಿ ಹೆಚ್ಚಾಗಿದೆ. ಕಾರಣ ಹುಡುಗಿಯರು ಕಡಮೆ ಸಂಬಳದ ಕೆಲಸಕ್ಕೂ ಸೇರಿಕೊಳ್ಳುತ್ತಾರೆ. ಅವರಿಗೆ ಅವರ ವೈಯುಕ್ತಿಕ ಜೀವನ ನಿರ್ವಹಣೆಯೇ ಪ್ರಧಾನ. ಗಂಡು ಮಕ್ಕಳಿಗೆ ಕಡಮೆ ಸಂಪಾದನೆಯಿದ್ದರೆ, ಹೆತ್ತವರನ್ನು ನೋಡಿಕೊಳ್ಳಲು ಮದುವೆಯಾದರೆ ಹೆಂಡತಿ ಮಕ್ಕಳ ಜವಾಬ್ದಾರಿ ವಹಿಸಲು ಅಗತ್ಯವಾದಷ್ಟು ಸಂಪಾದನೆ ಕೊಡದ ಕೆಲಸಕ್ಕೆ ಸೇರಿದರೆ ವಿವಾಹದ ಆಲೋಚನೆಯನ್ನು ಬಿಡಬೇಕಷ್ಟೆ.

ಅವಶ್ಯಕತೆಯೆಂದರೆ, ವಿವಾಹವು ನಮ್ಮ ಇಹಪರ ಶ್ರೇಯಸ್ಸಿಗೆ ಕಾರಣವಾಗುವಂತಹುದು. ಹೆಣ್ಣು ಗಂಡಿನ ಸಂಗಾತಿ ಜೀವನಕ್ಕೆ ದೈಹಿಕ ಸುಖಕ್ಕೆ ವಿವಾಹವೇ ಅವಶ್ಯವಾಗಿತ್ತು. ಆದರೆ ಇಂದು ಸರಕಾರದ ಹಲವಾರು ಸೌಲಭ್ಯಗಳಿಂದಾಗಿ ಇವನ್ನು ಪಡೆಯಲು ವಿವಾಹದ ಅವಶ್ಯಕತೆಯಿಲ್ಲ.

ಆದುದರಿಂದ ನಮ್ಮ ಸಮಾಜದಲ್ಲಿ ಹಿಂದಿನಂತೆ ಹುಡುಗಿಯರಿಗೆ ವಿವಾಹವೆಂಬುದು ಅನಿವಾರ್ಯತೆಯೂ ಅಲ್ಲ ಅವಶ್ಯಕತೆಯೂ ಅಲ್ಲ ಎಂಬುದೇ ವಧುಗಳ ಕೊರತೆಗೆ ಪ್ರಧಾನ ಕಾರಣ. ಹುಡುಗಿಯರು ವಿವಾಹವಾಗದೇ ಇರಲು ನಿರ್ಧರಿಸಿದಾಗ ವಿವಾಹಾಕಾಂಕ್ಷಿಗಳಾದ ವರಮಹಾಶಯರಿಗೆ ವಧುಗಳೆಲ್ಲಿ ಸಿಗಬೇಕು?

ಈ ಸಮಸ್ಯೆಗೆ ಪರಿಹಾರವೆಂತು? ಸಾಮಾಜಿಕ ಚಿಂತನೆಯಲ್ಲಿ ಬದಲಾವಣೆಯಾದರೆ ಮಾತ್ರ ಪರಿಹಾರ ಸಾಧ್ಯ.

ಉದ್ಯೋಗಂ ಪುರುಷ ಲಕ್ಷಣಂ, ಉದ್ವೇಗಂ ಸ್ತ್ರೀ ಲಕ್ಷಣಂ ಎಂಬುದು ಹಿರಿಯರ ಅಂಬೋಣ. ಇದರ ಪೂರ್ವಾರ್ಧವನ್ನು ಬಹುಜನರು, ಬಹುಬಾರಿ ಉಚ್ಚರಿಸುತ್ತಾ, ಸ್ತ್ರೀಪರ ವಾದ ಮಾಡುವವರು, ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯನ್ನು ಕೀಳಾಗಿ ಕಂಡಿದ್ದಾರೆ ಎಂದು ಆಕ್ಷೇಪಿಸುತ್ತಾರೆ.

ಉದ್ಯೋಗವು ಧನಸಂಪಾದನೆಗೆ ಅವಶ್ಯ. ಕುಟುಂಬದ ಜವಾಬ್ದಾರಿಯನ್ನು ಹೊರುವ ಗಂಡಸು ಉದ್ಯೋಗ ಮಾಡಿಕೊಂಡು ಧನ ಸಂಪಾದನೆ ಮಾಡಬೇಕು. ಅಂದರೆ ಸ್ತ್ರೀಯರು ಉದ್ಯೋಗ ಮಾಡಲಿಕ್ಕಿಲ್ಲವೆಂದು ಅರ್ಥವಲ್ಲ. ಉದ್ಯೋಗವು ಪುರುಷರ ಲಕ್ಷಣ ಎಂದಲ್ಲ ಪುರುಷ ಲಕ್ಷಣ ಎಂದು ತಿಳಿದುಕೊಂಡರೆ, ಅಂದರೆ ಉದ್ಯೋಗ ಮಾಡಿ ಸಂಪಾದನೆ ಮಾಡುವ ಸ್ತ್ರೀಯರು ಕುಟುಂಬದ ಜವಾಬ್ದಾರಿ ವಹಿಸಿಕೊಳ್ಳಲು ಸಮರ್ಥರೆಂದು ತಿಳಿದರೆ ಬಹುಪಾಲು ಸಮಸ್ಯೆ ತೀರಿದಂತೆಯೇ.

ಅದೇ ರೀತಿ ಉದ್ವೇಗಂ ಸ್ತ್ರೀ ಲಕ್ಷಣ ಎಂದರೆ ಚಂಚಲ ಮನಸು ದೃಢಚಿತ್ತವಿಲ್ಲದಿರುವುದು ಸ್ತ್ರೀ ಲಕ್ಷಣ ಹೊರತು ಸ್ತ್ರೀಯರ ಲಕ್ಷಣ ಅಲ್ಲ ಎಂದು ತಿಳಿದುಕೊಂಡರೆ ಉತ್ತಮ.

ನಮ್ಮೊಡನಿರುವ ಮೃದು ಮನಸ್ಸಿನ, ಚಂಚಲ ಚಿತ್ತದಿಂದಾಗಿ ನಿರ್ಧಾರ ತೆಗೆದುಕೊಳ್ಳಲಾರದ ಗಂಡಸನ್ನು ನಾವು ಹೆಣ್ಣಿಗನೆಂದು ಕರೆಯುವುದಿಲ್ಲವೇ? ಹಾಗೆಯೇ ಇನ್ನೊಬ್ಬನ ಆಲೋಚನೆಗಳನ್ನು ತನ್ನದೇ ಚಿಂತನೆಗಳನ್ನು ತೂಗಿ ನೋಡಿ ಸ್ವೀಕಾರಾರ್ಹವಲ್ಲದವುಗಳನ್ನು ತ್ಯಜಿಸಿ ಮುನ್ನುಗ್ಗುವವ ಹೆಣ್ಣನ್ನು ಗಂಡುಬೀರಿ ಎಂದು ಕರೆಯುವುದಿಲ್ಲವೇ? ಮೇಲೆ ಹೇಳಿದ ಲಕ್ಷಣಗಳು ಪುರುಷ ಹಾಗೂ ಸ್ತ್ರೀಲಿಂಗಿಗಳ ಲಕ್ಷಣಗಳಲ್ಲ. ಮಾನವನ ಮನಸ್ಥಿತಿಯ ಲಕ್ಷಣಗಳಾಗಿವೆ.

ನಾವು ಇಂದು ನೋಡುತ್ತಿರುವುದೇನು? ಮಾಸಿಕ ರೂ.25,000/- ಸಂಪಾದನೆಯಿರುವ ಹೆಣ್ಣು ತನ್ನ ಗಂಡನಿಗೆ ರೂ.50,000/- ಸಂಪಾದನೆ ಇರಬೇಕೆಂದು ಇಚ್ಛಿಸುತ್ತಾಳೆ. ಸಂಸಾರದ ಸಂಪೂರ್ಣ ಖರ್ಚು ವೆಚ್ಚಗಳನ್ನು ಅವನೇ ನಿರ್ವಹಿಸಬೇಕೆಂದೂ, ತನ್ನ ಸಂಪಾದನೆ, ತನ್ನ ವೈಯಕ್ತಿಕ ಪ್ರತಿಷ್ಠೆಗೆ ಮಾತ್ರ ತಾನು ಖರ್ಚು ಮಾಡಲು ಸ್ವತಂತ್ರಳಿರಬೇಕೆಂದೂ ಬಯಸುತ್ತಾಳೆ.


ಮಾಸಿಕ ರೂ.25,000/- ಸಂಪಾದನೆ ಮಾಡುವ ಹುಡುಗ ನಿರುದ್ಯೋಗಿ ಹುಡುಗಿಯನ್ನು ಮದುವೆಯಾಗಿ ಸಂಸಾರ ಮಾಡಲು ಸಮರ್ಥನೂ ಇರುತ್ತಾನೆ. ಹಾಗೆಯೇ ಎಷ್ಟೋ ಸಂಸಾರಗಳು ನಡೆಯುತ್ತವೆ. ಅದೇ ರೀತಿ ಪುರುಷ ಲಕ್ಷಣವಾದ ಉದ್ಯೋಗದಿಂದ ಸಾಕಷ್ಟು ಸಂಪಾದನೆ ಇರುವ ಹುಡುಗಿ, ತನಗಿಂತ ಕಡಿಮೆ ವರಮಾನವಿರುವ ಅಥವಾ ಅತ್ಯಲ್ಪ ವರಮಾನವಿರುವ ಹುಡುಗನನ್ನು ಮದುವೆಯಾಗಿ ಸಂಸಾರದ ಜವಾಬ್ದಾರಿಯನ್ನು (ಆರ್ಥಿಕವಾಗಿ) ಹೊತ್ತು ನಡೆಯುವರಿತಾದರೆ, ಸಂಪಾದನೆ ಸಂಸಾರ ನಿರ್ವಹಣೆಗೆ ಸಾಲದೆಂಬ ಕಾರಣಕ್ಕೆ ತಿರಸ್ಕೃತವಾದ ಅದೆಷ್ಟೋ ಗಂಡುಗಳಿಗೆ ವಿವಾಹವಾಗುವುದಿಲ್ಲವೆ!

ಉದ್ಯೋಗವಿಲ್ಲದಿದ್ದ ಮೇಲೆ ಸಂಪಾದನೆ ಇಲ್ಲ ಅಥವಾ ಸಾಲದೆಂದು ಎಣಿಸುವುದು ತಪ್ಪಲ್ಲವೆ? ಕೃಷಿ, ಸಣ್ಣ ಉದ್ದಿಮೆ, ಹೈನುಗಾರಿಕೆ, ಪೌರೋಹಿತ್ಯ ಮೊದಲಾದ ವೃತ್ತಿ ಮಾಡುತ್ತಿದ್ದ ಅದೆಷ್ಟೋ ಗಂಡಸರಿಗೆ ಸಂಪೂರ್ಣ ಸಹಕಾರ ಕೊಟ್ಟು ಸಂಸಾರ ನಡೆಸಿದ ಹೆಂಗಸರಿಲ್ಲವೇ? ಇಂದು ಇಂತಹ ಜೀವನ ನಡೆಸಲು ನಮ್ಮ ಹುಡುಗಿಯರು ಸಿದ್ಧರಿಲ್ಲ. ಬದುಕಿಗೋಸ್ಕರ ಹೋರಾಟ ಮಾಡಲು ಸಿದ್ಧರಿಲ್ಲ. ಅನಾವಶ್ಯಕವಾಗಿ ಸಂಸಾರ ಬಂಧನದಲ್ಲಿ ಸಿಲುಕಿ ಗಂಡು ಮಕ್ಕಳ ಸೇವೆಯಲ್ಲಿಯೇ ಯಾಕಾಗಿ ಬದುಕು ಸಾಗಿಸಬೇಕು? ಸ್ವತಂತ್ರ ಹಕ್ಕಿಗಳಂತೆ ಹಾರಾಡುತ್ತಾ ಸ್ವಚ್ಛಂದ ಜೀವನವನ್ನು ನಡೆಸಬಾರದೇಕೆ ಎಂದಾಲೋಚಿಸುವ ಹೆಣ್ಣುಗಳಿಗೇನೂ ಕೊರತೆಯಿಲ್ಲ.

ಅಂಕೆ ಸಂಖ್ಯೆಗಳ ಪ್ರಕಾರ 100 ಗಂಡು ಮಕ್ಕಳಿಗೆ ಲಭ್ಯರಿರುವ ಹೆಣ್ಣು ಮಕ್ಕಳು 90 ಎಂದು ಇಟ್ಟುಕೊಳ್ಳೋಣ. ಈ 90 ಹುಡುಗಿಯರೂ 100 ಹುಡುಗರಲ್ಲಿ 90 ಹುಡುಗರನ್ನು ಆರಿಸಿಕೊಂಡು ಮದುವೆಯಾಗಲು ಸಿದ್ಧರಿದ್ದರೆ 10 ಹುಡುಗರು ಮಾತ್ರ ವಿವಾಹವಾಗದೆ ಉಳಿಯುವರಷ್ಟೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. 90 ಹುಡುಗಿಯರಲ್ಲಿ ಅಂದಾಜು 30 ಹುಡುಗಿಯರು ಮೇಲೆ ಹೇಳಿದ ಕಾರಣಕ್ಕೋಸ್ಕರ ವಿವಾಹವಾಗದೇ ಉಳಿಯಲು ಇಚ್ಛಿಸುತ್ತಾರೆ. ಆಗ 40 ಹುಡುಗರು ವಿವಾಹವಾಗದೇ ಉಳಿದು ವಧುಗಳ ಅಭಾವ ಎದ್ದು ಕಾಣುತ್ತದೆ. ವಿವಾಹವಾಗದೇ ಉಳಿಯಲು ನಿರ್ಧರಿಸಿರುವುದು ಹುಡುಗಿಯರೇ ಆದುದರಿಂದ ಅವರ ಸಮಸ್ಯೆ ಎದ್ದು ಕಾಣುವುದಿಲ್ಲ. ವಿವಾಹಾಪೇಕ್ಷಿಗಳಾದ ಹುಡುಗರಿಗೆ ವಧುವಿನ ಕೊರತೆ ಎದ್ದುಕಾಣುತ್ತದೆ. ಇದರಲ್ಲಿ 10 ಜನ ನಮಗೆ ವಿವಾಹ ಬೇಡವೆಂದು ನಿರ್ಧರಿಸಿದ ಹುಡುಗರಿರಬಹುದಾದರೂ ಉಳಿದ 30 ಜನಕ್ಕೆ ವಧುಗಳ ಅಭಾವ ನೀಗಲಾರದುದಾಗಿದೆ.

ಇಂದಿನ ಪರಿವರ್ತನಾಯುಗದಲ್ಲಿ ನೈತಿಕತೆ ಬೆಲೆ ಕುಸಿಯುತ್ತಿರುವ ಸಮಯದಲ್ಲಿ ಈ ಸಮಸ್ಯೆ ಅನಿವಾರ್ಯವಾಗಿ ಬೆಳೆದು ಸ್ವಸ್ಥ ಸಮಾಜ ನಿರ್ಮಾಣ ಚಿಂತಕರಿಗೆ ತಲೆನೋವಾಗಿ ಪರಿಣಮಿಸುವುದರಲ್ಲಿ ಆಶ್ಚರ್ಯವಿಲ್ಲ. ಸಂಸಾರದಲ್ಲಿ ಇದು ಈಸಬೇಕು, ಈಸಿ ಜಯಿಸಬೇಕು ಎಂಬ ಸಿದ್ಧಾಂತವನ್ನು ಒಪ್ಪಿಕೊಳ್ಳಲು ಹುಡುಗ ಹುಡುಗಿಯರು ಸಿದ್ಧರಾದರೆ ಅವಿವಾಹಿತರ ಸಂಖ್ಯೆ ಗಣನೀಯವಾಗಿ ಕುಸಿಯಬಹುದು. □

## ನಮ್ಮನ್ನಗಲಿದ ಖ್ಯಾತ ಯಕ್ಷಗಾನ ಕಲಾವಿದ ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯ



ಬಡಗುತಿಟ್ಟು ಯಕ್ಷಗಾನದ ಹಿರಿಯಬಣ್ಣದ ವೇಷಧಾರಿ ಶ್ರೀಯುತ ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯನವರು 85 ವರ್ಷಗಳ ತುಂಬು ಜೀವನ ನಡೆಸಿ ಮಾರ್ಚ್ 31ರಂದು ನಿಧನರಾದರು. ಮೃತರು ನಾಲ್ವರು ಪುತ್ರರು, ಐವರು ಪುತ್ರಿಯರು, ಅಪಾರ ಬಂಧುಬಳಗ ಮತ್ತು ಅಭಿಮಾನಿಗಳನ್ನು ಅಗಲಿದ್ದಾರೆ. ಕುಂದಾಪುರ ತಾಲೂಕಿನ ಶಿರಿಯಾರ ಸಮೀಪ ಸಕ್ಕಟ್ಟಿನಲ್ಲಿ 1926ರಲ್ಲಿ ಸುಬ್ಬಣ್ಣಯ್ಯ ಮತ್ತು ರಾಜಮ್ಮ ದಂಪತಿಗಳ ಸುಪುತ್ರನಾಗಿ ಜನಿಸಿದ ಇವರು ಚಿಕ್ಕಂದಿನಲ್ಲಿ ಶಾಲೆ ತೊರೆದು ಅಮೃತೇಶ್ವರಿ ಮೇಳ ಸೇರಿ ತಮ್ಮ ವೃತ್ತಿ ಜೀವನ ಮುಂದುವರೆಸಿದರು. ಇವರು ಮಂದಾರ್ತಿ ಮೇಳದಲ್ಲಿ 39 ವರ್ಷಗಳ ಕಾಲ ತಿರುಗಾಟ ಮಾಡಿ ಜನಾನುರಾಗಿಯಾಗಿದ್ದರು. ಯಕ್ಷಗಾನದ ದಿಗ್ಗಜರಾದ ರಾಷ್ಟ್ರಪ್ರಶಸ್ತಿ ವಿಜೇತ ಹಾರಾಡಿ ರಾಮ ಗಾಣಿಗ, ಕುಷ್ಟ ಗಾಣಿಗ, ನಾರಾಯಣ ಗಾಣಿಗ ಇವರೊಂದಿಗೆ ತಿರುಗಾಟ ಮಾಡಿದ ಕೀರ್ತಿ ಇವರದ್ದಾಗಿದೆ. 1986ರಲ್ಲಿ ಕರ್ನಾಟಕ ಜಾನಪದ ಯಕ್ಷಗಾನ ಅಕಾಡಮಿ ಪ್ರಶಸ್ತಿ, ಕರ್ನಾಟಕ ರಾಜ್ಯ ಪ್ರಶಸ್ತಿ, ಬಿ.ಬಿ. ಶೆಟ್ಟಿ ಪ್ರಶಸ್ತಿಗಳಲ್ಲದೇ ಇನ್ನೂ ಹಲವಾರು ಪ್ರಶಸ್ತಿಗಳು ಇವರಿಗೆ ಬಂದಿವೆ. ಸುದೀರ್ಘ ಕಾಲ ಬಡಗುತಿಟ್ಟು ಯಕ್ಷರಂಗದಲ್ಲಿ ಬಣ್ಣದ ವೇಷದಲ್ಲಿ ಮೆರೆದ ಸಕ್ಕಟ್ಟುರವರ ನಿಧನದಿಂದ ಬಡಗುತಿಟ್ಟು ಬಣ್ಣದ ಲೋಕ ಬಡವಾಗಿದೆ. ನಮ್ಮ ಸಮಾಜದ ಹಿರಿಯ ಯಕ್ಷಗಾನ ಕಲಾವಿದರಾದ ಇವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

**ನಗೆಹನಿ**

### ಹೆಸರು !

ಏನಯ್ಯಾ ನಿನ್ನ ಹೆಸರು? ನ್ಯಾಯಾಧೀಶರು ಆಪಾದಿತನನ್ನು ಪ್ರಶ್ನಿಸಿದರು.
''ನನ್ನ ಹೆಸರು 'ಮೂಗ'... ಸ್ವಾಮೀ'' ಆಪಾದಿತ ಉತ್ತರಿಸಿದ.
''ಅಲ್ಲಾ ಕಣಯ್ಯಾ.... 'ಮೂಗ' ಅಂತ ಹೇಳ್ತಿಯಾ, ಚೆನ್ನಾಗೇ ಮಾತಾಡ್ತೀಯಲ್ಲಯ್ಯ?'' ಎಂದರು ನ್ಯಾಯಾಧೀಶರು.
ತತ್‌ಕ್ಷಣ ಆಪಾದಿತ ಹೇಳಿದ-''ನನ್ನ ತಂದೆಯ ಹೆಸರು 'ಹನ್ಮಂತು' ಅಂತ ಸ್ವಾಮಿ, ಅವರಿಗೂ ಬಾಲವಿರಲಿಲ್ಲ''.

### ಯಾಕೋ ತಡ?

ರಾಜು ಇವತ್ತೂ ತಡವಾಗಿ ಶಾಲೆಗೆ ಬಂದ
''ಯಾಕೋ ತಡ?'' ಉಪಾಧ್ಯಾಯರು ಕೇಳಿದರು
''ಇವತ್ತು ನಾನು ಮನೆ ಬಿಡಬೇಕೆನ್ನುವ ಹೊತ್ತಿಗೆ ಅಪ್ಪ-ಅಮ್ಮ ಜಗಳವಾಡತೊಡಗಿದರು'' ರಾಜು ಕಾರಣ ಹೇಳಿದ.
''ಅವರು ಜಗಳವಾಡಿದರೆ ನೀನು ಯಾಕೆ ತಡ?''
''ನನ್ನ ಎರಡೂ ಷೂಗಳು ಅವರಿಬ್ಬರ ಕೈಲಿದ್ದವು. ಷೂ ಹಾಕಿಕೊಳ್ಳದೇ ಹೇಗೆ ಶಾಲೆಗೆ ಬರೋದು?''

### ಕಟ್ಟಿಗೆ

''ನಿಮ್ಮ ಮಕ್ಕಳೆಲ್ಲಾ ಏನ್ಮಾಡ್ತಾ ಇದ್ದಾರೆ!''
''ಒಬ್ಬ ಕಟ್ಟಿಗೆಯಲ್ಲಿ ಇದ್ದಾನೆ''
''ಕಟ್ಟಿಗೆ? ಹಾಗೆಂದರೆ''
''ಅದೇ 'ಸೌದಿ' ಅಂತ ಒಂದು ದೇಶ ಇದೆ ಅಲ್ವಾ. ಸೌದಿ ಅಂದರೆ ಕಟ್ಟಿಗೆ ತಾನೆ ಅಲ್ಲಿ ಇದ್ದಾನೆ.''

ಸಂಗ್ರಹ : MNS


# ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (0)



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

**ಶ್ರೀಶಾರದಾ ಪತ್ರಿಕೆಯ ಮಹಾಪೋಷಕರಾಗಿ ಶ್ರೀಮತಿ ಮಾಲತಿ ಶಿವರಾವ್**

ಉಡುಪಿಯ ವಿಭುದಪ್ರಿಯ ನಗರದಲ್ಲಿ ವಾಸವಾಗಿರುವ ನಮ್ಮ ಸಮಾಜದ ಹಿರಿಯರೂ, ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ-ಮಹಿಳಾ ವಿಭಾಗದ ಕ್ರಿಯಾಶೀಲ ಸದಸ್ಯರೂ ಆಗಿರುವ ಶ್ರೀಮತಿ ಮಾಲತಿ ಶಿವರಾವ್ ಇವರು ಶ್ರೀಶಾರದಾ ಪತ್ರಿಕೆಯ ಮಹಾಪೋಷಕರಾಗಿ ತಮ್ಮ ಪ್ರೋತ್ಸಾಹವನ್ನು ನೀಡಿದ್ದಾರೆ. ಇವರಿಗೆ ಶ್ರೀಶಾರದಾ ಬಳಗ ಮತ್ತು ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಕೃತಜ್ಞತೆಯನ್ನು ಸಲ್ಲಿಸುತ್ತದೆ.

## ಗೃಹಪ್ರವೇಶ

**'ಆದಿತ್ಯರಾಮ ನಿಲಯ'**

ಬೈಲಕೆರೆಯ ಶ್ರೀಮತಿ ಅನ್ನಪೂರ್ಣ ಮತ್ತು ಶ್ರೀ ರಾಮಚಂದ್ರ ರಾವ್ ಹಾಗೂ ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ಅಜಿತ್ ಬೈಲಕೆರೆ ಇವರು ಬೆಂಗಳೂರಿನ ಯಲಹಂಕ, ದೊಡ್ಡಬಳ್ಳಾಪುರ ರಸ್ತೆಯ ಪುಟ್ಟೇನಹಳ್ಳಿಯ ನಾಗಾರ್ಜುನ ಮೆಡೋಸ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಆದಿತ್ಯರಾಮ ನಿಲಯದ ಪ್ರವೇಶೋತ್ಸವವನ್ನು ತಾ.13-3-2011ರಂದು ನೆರವೇರಿಸಿದರು.

## ಶುಭ ಜನನ

ಚಿಟ್ಪಾಡಿಯ ಸುಹಾಸ ರಾವ್ ಮತ್ತು ಶ್ರೀಮತಿ ರಶ್ಮಿ ಇವರಿಗೆ 30-3-2011ರಂದು ಗಂಡು ಮಗುವಿನ ಜನನ.

## ನಿಧನ

**ಸುಬ್ರಹ್ಮಣ್ಯ ರಾವ್ ಕರಂದಾಡಿ**

ಕಾಪು ಮಜೂರು (ಕರಂದಾಡಿ) ಕೆ.ಸುಬ್ರಹ್ಮಣ್ಯ ರಾವ್ (63 ವರ್ಷ) ಇವರು ತಾ.27-3-2011 ರಂದು ಅಸೌಖ್ಯದ ಕಾರಣ ನಿಧನ ಹೊಂದಿದರು. ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಇವರು ಅಗಲಿದ್ದಾರೆ

★★★ ★★★


**ನಾರಾಯಣರಾವ್ ಕುಕ್ಕೆಹಳ್ಳಿ**

ಪೆರ್ಡೂರು ಸಮೀಪದ ಕುಕ್ಕೆಹಳ್ಳಿಯವರಾದ ನಾರಾಯಣ ರಾವ್ (94 ವರ್ಷ) ತಾ.28-3-2011ರಂದು ನಿಧನರಾದರು. ಮೃತರು ಇಬ್ಬರು ಪುತ್ರರಾದ ಮಹೇಶ್‌ರಾವ್ ಮತ್ತು ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ ನಿ., ಕುಕ್ಕೆಕಟ್ಟೆ ಶಾಖೆಯ ಪ್ರಬಂಧಕರಾದ ವಿಶ್ವನಾಥರಾವ್ ಹಾಗೂ ಇಬ್ಬರು ಪುತ್ರಿಯರನ್ನು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

## ಮೀನ ಮಾಸ ವಿಶೇಷ ದಿನಗಳು


| | |
|---|---|
| 14-04-2011 | ಮೇಷ ಸಂಕ್ರಮಣ<br>ಸರ್ವೇಕಾದಶಿ<br>ಅಶ್ವಿನಿ ನಕ್ಷತ್ರಾರಂಭ |
| 15-04-2011 | ಪ್ರದೋಷ,<br>ಸೌರಯುಗಾದಿ |
| 18-04-2011 | ಪೂರ್ಣಿಮಾ |
| 21-04-2011 | ಸಂಕಷ್ಟಹರ ಚತುರ್ಥಿ<br>ಚಂದ್ರೋದಯ ಘಂಟೆ ರಾತ್ರಿ 10-12 |
| 27-04-2011 | ಭರಣೀ ನಕ್ಷತ್ರಾರಂಭ |
| 28-04-2011 | ಸರ್ವೇಕಾದಶಿ |
| 30-04-2011 | ಪ್ರದೋಷ, |
| 03-05-2011 | ಅಮಾವಾಸ್ಯಾ |
| 06-05-2011 | ಅಕ್ಷಯ ತೃತೀಯಾ |
| 08-05-2011 | ಶ್ರೀ ಶಂಕರ ಜಯಂತೀ |
| 11-05-2011 | ಕೃತ್ತಿಕಾ ನಕ್ಷತ್ರಾರಂಭ |
| 13-05-2011 | ಸ್ಮಾರ್ತೈಕಾದಶೀ |
| 14-05-2011 | ಭಾಗವತೈಕಾದಶೀ |
| 15-05-2011 | ವೃಷಭ ಸಂಕ್ರಮಣ,<br>ಪ್ರದೋಷ |

**ಅಭಿನಂದನೆ**



### ತಿಲಕ್ ರಾವ್ - ಎಮ್.ಎ. ಪರೀಕ್ಷೆಯಲ್ಲಿ ಚಿನ್ನದ ಪದಕ

ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಮೋಹನ ರಾವ್ ಇವರ ಮಗನಾದ ತಿಲಕ ರಾವ್ ಇವರು ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ 2010 ಮತ್ತು 2011ನೇ ಸಾಲಿನ ಎಮ್.ಎ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು ಮೊದಲಸ್ಥಾನವನ್ನು ಗಳಿಸಿದ್ದಾರೆ. ತಾ.14-03-2011ರಂದು ಮೈಸೂರಿನಲ್ಲಿ ನಡೆದ ವಾರ್ಷಿಕ ಘಟಿಕೋತ್ಸವದಲ್ಲಿ ಇವರಿಗೆ ಸನ್ಮಾನ್ಯ ರಾಜ್ಯಪಾಲರಾದ ಹಂಸರಾಜ್ ಭಾರದ್ವಾಜರವರು ಚಿನ್ನದ ಪದಕವನ್ನು ನೀಡು ಪದವಿ ಪ್ರದಾನ ಮಾಡಿದರು. ಇವರು ಬೆಂಗಳೂರಿನ ಚನ್ನೇನಹಳ್ಳಿಯಲ್ಲಿರುವ ವೇದವಿಜ್ಞಾನ ಗುರುಕುಲದಲ್ಲಿ ಸಂಸ್ಕೃತ ಅಧ್ಯಾಪನವನ್ನು ಮಾಡುತ್ತಿದ್ದಾರೆ.



### ಸ್ವಸ್ತಿಕ್ ನೆಲ್ಲಿಕುಂಜೆ

ಜನವರಿ ತಿಂಗಳ 23 ತಾರೀಖಿನಂದು ಕೇರಳದ ಕೊಟ್ಟಾಯಂನಲ್ಲಿ ನಡೆದ ವಿದ್ಯಾರ್ಥಿಗಳ ರಾಜ್ಯಮಟ್ಟದ ಯಕ್ಷಗಾನ ಸ್ಪರ್ಧೆಯಲ್ಲಿ ಸ್ವಸ್ತಿಕ್ ನೆಲ್ಲಿಕುಂಜೆ ಪ್ರತಿನಿಧಿಸಿದಂತಹ ''ಪೆರ್ಲ ಸತ್ಯನಾರಾಯಣ ಹೈಸ್ಕೂಲಿನ'' ತಂಡಕ್ಕೆ 'ಎ' ಗ್ರೇಡ್‌ನೊಂದಿಗೆ ಪ್ರಥಮ ಸ್ಥಾನ ಲಭಿಸಿದೆ. 'ಬಭ್ರುವಾಹನ ಕಾಳಗ' ಎಂಬ ಪ್ರಸಂಗದಲ್ಲಿ ಅರ್ಜುನನಾಗಿ ಅಭಿನಯಿಸಿದ ಈತನ ಅಭಿನಯವೂ ಮಾತಿನ ಶೈಲಿಯೂ ತುಂಬ ಮನೋಹರ ವಾಗಿದ್ದುವು. ಇವನು ಪೆರ್ಲದಲ್ಲಿ 'ಪಡ್ರೆ ಚಂದು ಸ್ಮಾರಕ ಯಕ್ಷಗಾನ ನಾಟ್ಯ ತರಬೇತಿ ಕೇಂದ್ರ' ಎಂಬ ಹೆಸರಿನ ಯಕ್ಷಗಾನ ನಾಟ್ಯ ಶಾಲೆಯಲ್ಲಿ ನಾಟ್ಯಗುರು ಸಬ್ಬಣ್ಣಕೋಡಿ ರಾಮಭಟ್ ಎಂಬವರಲ್ಲಿ ಯಕ್ಷಗಾನ ಕಲೆಯನ್ನು ಅಭ್ಯಾಸ ಮಾಡುತ್ತಿದ್ದಾನೆ. 10ನೇ ತರಗತಿಯಲ್ಲಿ ಕಲಿಯುತ್ತಿರುವ ಈತನು ಶ್ರೀ ಶರತ್ ಕುಮಾರ್-ಸುಕನ್ಯಾ ದಂಪತಿಗಳ ಪುತ್ರನೂ ನೆಲ್ಲಿಕುಂಜೆ ಸುಬ್ಬರಾವ್-ಸರಳಾದೇವಿ ಇವರ ಪೌತ್ರನೂ ಆಗಿರುತ್ತಾನೆ.

ಈ ಹಿಂದೆ ಜಿಲ್ಲಾಮಟ್ಟದ ವಿಜ್ಞಾನ ಸ್ಪರ್ಧೆಯಲ್ಲಿ ಹುಲ್ಲು ಕತ್ತರಿಸುವ ಯಂತ್ರವನ್ನು ಸ್ವತಃ ತಯಾರಿಸಿ ಪ್ರಾತ್ಯಕ್ಷಿಕೆ ಏರ್ಪಡಿಸಿ ಪ್ರಥಮ ಬಹುಮಾನ ಗಳಿಸಿರುತ್ತಾನೆ. ಮನೆಯಲ್ಲಿದ್ದ ಹಳೆಯ ಮಷಿನ್‌ಗಳನ್ನು ಬಳಸಿ ಸಣ್ಣ ಬುಲ್‌ಡೋಜರ್ ತಯಾರಿಸಿ ಮೆಚ್ಚುಗೆ ಪಡೆದಿರುತ್ತಾನೆ.

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ: ಸಿಹಿಮೂತ್ರ ರೋಗಿಗಳ ಆಹಾರ ಹೇಗಿರಬೇಕು?** **ಡಾ। ವೈ. ಸುದರ್ಶನ ರಾವ್**

**ಉತ್ತರ:** ನಮ್ಮ ದೇಹದ ಬೆಳವಣಿಗೆಗೆ ಮತ್ತು ದೇಹದ ಎಲ್ಲಾ ಅಂಗಾಂಗಗಳು ಮಾಡುವ ಕೆಲಸಕ್ಕೆ ಶಕ್ತಿ ಅಗತ್ಯ. ದೇಹಕ್ಕೆ ಬೇಕಾದ ಈ ಶಕ್ತಿಯನ್ನು ನಾವು ತಿನ್ನುವ ಆಹಾರದ ಮೂಲಕ ಪಡೆಯುತ್ತೇವೆ. ಆಹಾರದಲ್ಲಿ ಅಡಕವಾದ ಶಕ್ತಿಯನ್ನು ದೇಹದ ಅಂಗಾಂಶಗಳು ಆಮ್ಲಜನಕದೊಂದಿಗೆ ಕೆಲವು ರಾಸಾಯನಿಕ ಕ್ರಿಯೆ (ದಹನ)ಗಳನ್ನು ನಡೆಸುವ ಮುಖಾಂತರ ಪಡೆಯುತ್ತವೆ.

ಆಹಾರದ ರೂಪದಲ್ಲಿ ಸೇವಿಸುವ ವಸ್ತುಗಳನ್ನು ಈ ರೀತಿಯಾಗಿ ವಿಂಗಡಿಸಬಹುದು 1) ಶರ್ಕರ ಪಿಷ್ಟಗಳು (carbohydrates) 2) ಪ್ರೋಟೀನ್‌ಗಳು 3) ಕೊಬ್ಬು (fat) 4) ಲವಣಗಳು (minerals) 5) ನೀರು 6) ನಾರು (fiber) 7) ವಿಟಮಿನ್‌ಗಳು. ಆಹಾರದಿಂದ ಲಭ್ಯವಾಗುವ ಶಕ್ತಿಯನ್ನು ಕ್ಯಾಲೋರಿ ಎಂಬ ಮಾನದಿಂದ ಅಳೆಯುತ್ತಾರೆ. ಒಬ್ಬ ಆರೋಗ್ಯವಂತ ಮನುಷ್ಯನಿಗೆ ದಿನಕ್ಕೆ ಸುಮಾರು 1800ರಿಂದ 2000 ಕ್ಯಾಲೋರಿಗಳಷ್ಟು ಶಕ್ತಿಬೇಕು.

ಒಂದು ಗ್ರಾಂ ಪಿಷ್ಟ ಮತ್ತು ಪ್ರೋಟೀನ್‌ನಿಂದ 4 ಕ್ಯಾಲೋರಿ ಶಕ್ತಿ ಪಡೆಯಬಹುದು. ಹಾಗೆಯೇ ಒಂದು ಗ್ರಾಂ ಕೊಬ್ಬಿನಿಂದ 9 ಕ್ಯಾಲೋರಿ ಶಕ್ತಿ ಪಡೆಯಬಹುದು. ನೀರು, ಲವಣ ಹಾಗೂ ವಿಟಮಿನ್‌ಗಳು ಆಹಾರದ ಪಚನಕ್ಕೂ ಮತ್ತು ದೇಹದಲ್ಲಿ ನಡೆಯುವ ವಿವಿಧ ರಾಸಾಯನಿಕ ಕ್ರಿಯೆಗಳಲ್ಲಿ ಉಪಯೋಗವಾಗುತ್ತವೆ. ಹಾಗೆಯೆ ಆಹಾರದಲ್ಲಿರುವ ನಾರಿನಿಂದ ಯಾವುದೇ ಕ್ಯಾಲೋರಿ ಶಕ್ತಿ ಸಿಗುವುದಿಲ್ಲ. ಮನುಷ್ಯನು ದಿನನಿತ್ಯಕ್ಕೆ ಬೇಕಾಗುವಷ್ಟು ಕ್ಯಾಲೋರಿ ಶಕ್ತಿಯನ್ನು ಮಾಂಸಾಹಾರ ಅಥವಾ ಸಸ್ಯಾಹಾರದ ರೂಪದಲ್ಲಿ ಪಡೆಯುತ್ತಾನೆ.

ಸಿಹಿಮೂತ್ರ ರೋಗಿಗಳಲ್ಲಿ ಇನ್ಸುಲಿನ್ ಹಾರ್ಮೋನಿನ ಕೊರತೆಯಿಂದಾಗಿ ದೇಹವು ಶರ್ಕರಪಿಷ್ಟಗಳ ಪಚನಾನಂತರದ ಕೊನೆಯ ರೂಪವಾದ ಗ್ಲುಕೋಸನ್ನು ಶಕ್ತಿಯ ಮೂಲವನ್ನಾಗಿ ಬಳಸಿಕೊಳ್ಳಲು ವಿಫಲವಾಗುತ್ತದೆ. ಹಾಗಾಗಿ ಸಿಹಿಮೂತ್ರರೋಗಿಗಳಲ್ಲಿ ರಕ್ತದಲ್ಲಿ ಗ್ಲುಕೋಸ್‌ನ ಅಂಶವು ಬಳಕೆಯಾಗದೇ ಇರುವುದರಿಂದಾಗಿ ಹೆಚ್ಚಾಗುತ್ತದೆ.

ಸಿಹಿಮೂತ್ರ ರೋಗಿಗಳಿಗೂ ತಮ್ಮ ದಿನನಿತ್ಯದ ಕೆಲಸಗಳನ್ನು ಮಾಡುವುದಕ್ಕೆ, ದೇಹದ ಬೆಳವಣಿಗೆಗೆ, ನಶಿಸಿಹೋದ ಅಂಗಾಂಶಗಳ ಭರ್ತಿ ಮಾಡಿಕೊಳ್ಳುವುದಕ್ಕೆ ಇತರ ಆರೋಗ್ಯವಂತ ಮನುಷ್ಯರಷ್ಟೇ ಕ್ಯಾಲೋರಿಗಳು ಬೇಕಾಗುತ್ತದೆಂಬುದನ್ನು ಗಮನಿಸಬೇಕು. ಆದರೆ ಶರ್ಕರಪಿಷ್ಟಗಳನ್ನು ಶಕ್ತಿಯನ್ನಾಗಿ ಬಳಸಿಕೊಳ್ಳಲು ದೇಹಕ್ಕೆ ಅಸಾಧ್ಯವಾದುದರಿಂದ ಮಧುಮೇಹಿಗಳು ಶರ್ಕರಪಿಷ್ಟವನ್ನು ತಮ್ಮ ಶಕ್ತಿಯ ಮೂಲವನ್ನಾಗಿ ಬಳಸದೇ ಪ್ರೋಟೀನ್ ಅಥವಾ ಕೊಬ್ಬನ್ನು ಬಳಸುವುದು ತಮಗೆ ಬೇಕಾದಷ್ಟು ಕ್ಯಾಲೋರಿಗಳನ್ನು ಪಡೆಯುವುದರೊಂದಿಗೆ ತಮ್ಮ ರಕ್ತದ ಸಕ್ಕರೆಯ ಅಂಶವನ್ನೂ ಹದ್ದುಬಸ್ತಿನಲ್ಲಿಟ್ಟು ಕೊಳ್ಳುವ ಉತ್ತಮ ಉಪಾಯವೆಂದೆನಿಸದಿರದು. ಆದರೆ ಪ್ರಕೃತಿಯಲ್ಲಿ ಕೇವಲ ಶರ್ಕರಪಿಷ್ಟಗಳಿರುವ ಅಥವಾ ಕೇವಲ ಪ್ರೋಟೀನ್ ಮಾತ್ರ ಇರುವ ಅಥವಾ ಕೇವಲ ಕೊಬ್ಬು ಮಾತ್ರ ಇರುವ ಆಹಾರ ಪದಾರ್ಥ ಇಲ್ಲವೇ ಇಲ್ಲ. ಪ್ರಕೃತಿಯಲ್ಲಿ ಲಭ್ಯವಿರುವ ಪ್ರತಿಯೊಂದು ಆಹಾರ ಪದಾರ್ಥದಲ್ಲಿ ಮೇಲೆ ಹೇಳಿದ ಎಲ್ಲಾ ಪ್ರಕಾರದ ವಸ್ತುಗಳು ಮಿಳಿತವಾಗಿವೆ. ಆದರೆ ಕೆಲವಲ್ಲಿ ಶರ್ಕರಪಿಷ್ಟಗಳು ಹೆಚ್ಚಿದ್ದರೆ ಇನ್ನು ಕೆಲವಲ್ಲಿ ಪ್ರೋಟೀನ್‌ಗಳು ಮತ್ತು ಇನ್ನು ಕೆಲವಲ್ಲಿ ಕೊಬ್ಬು ಹಾಗೂ ಇನ್ನು ಕೆಲವಲ್ಲಿ ನಾರುಪದಾರ್ಥಗಳು ಹೆಚ್ಚಿರುತ್ತದೆ. ತಿನ್ನುವ ಆಹಾರದಲ್ಲಿ ವಿವಿಧತೆ ಹಾಗೂ ರುಚಿಗೂ ಪ್ರಾಮುಖ್ಯತೆ ಇದೆ ಎಂಬುದನ್ನು ಮರೆಯಲಾಗದು. ಅಷ್ಟೇ ಅಲ್ಲದೇ ತಿಂದ ಆಹಾರದಿಂದ ಸಾಕಷ್ಟು ಕ್ಯಾಲೋರಿ ಲಭ್ಯವಾಗುವುದರ ಜೊತೆಗೆ ಹಸಿವು ನೀಗಬೇಕೆಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು.

ಮಧುಮೇಹಿಗಳಿಗೆ ತಾವು ತಿನ್ನಬೇಕಾದ ಆಹಾರ ಮತ್ತು ಅದರ ಪ್ರಮಾಣವನ್ನು ನಿರ್ಧರಿಸುವಲ್ಲಿ ಎದುರಾಗುವ ಸಂಶಯಗಳು ಹೀಗಿವೆ:- ಮೊದಲನೆಯದಾಗಿ ತಮಗೆ ಅಗತ್ಯವಿರುವ ಕ್ಯಾಲೋರಿಗಳೆಷ್ಟು ಎಂದು ನಿರ್ಧರಿಸಿಕೊಳ್ಳುವುದು. ನಮಗೆ ನಿತ್ಯಕ್ಕೆ ಬೇಕಾದ ಕ್ಯಾಲೋರಿಯು ನಮ್ಮ ದೇಹದ ತೂಕ, ಲಿಂಗ, ವಯಸ್ಸು ಮತ್ತು ನಾವು ಮಾಡುವ ಕೆಲಸವನ್ನು ಅವಲಂಬಿಸಿಕೊಂಡಿರುತ್ತದೆ. ನಿಮಗೆ ಎಷ್ಟು ಕ್ಯಾಲೋರಿ ಬೇಕೆಂಬುದನ್ನು ನಿಮ್ಮ ವೈದ್ಯರು ಅಥವಾ ಡಯಟಿಶಿಯನ್ನರಲ್ಲಿ ವಿಚಾರಿಸಿ ತಿಳಿದುಕೊಳ್ಳುವುದು ಸುಲಭ. ಸಾಧಾರಣವಾಗಿ 60 ಕಿಲೋ ಇರುವ 30-50 ವರ್ಷ ಪ್ರಾಯದ ಆಫೀಸು ಕೆಲಸ ಮಾಡುವ ಗಂಡಸಿಗೆ ದಿನಕ್ಕೆ ಸುಮಾರು 2000 ಕ್ಯಾಲೋರಿ ಶಕ್ತಿ ಬೇಕಾದರೆ ಅದೇ ಪ್ರಾಯ ತೂಕದ ಹೆಂಗಸಿಗೆ 1800 ಕ್ಯಾಲೋರಿ ಬೇಕಾಗುತ್ತದೆ.

ಎರಡನೆಯದಾಗಿ ಯಾವ ಆಹಾರದಲ್ಲಿ ಸಕ್ಕರೆಯ ಅಂಶ ಎಷ್ಟಿದೆ ಎಂದು ತಿಳಿದುಕೊಳ್ಳುವುದು. ಸಾಮಾನ್ಯವಾಗಿ ನಾಲಗೆಗೆ ಸಿಹಿ ಅನಿಸಿದ ಎಲ್ಲ ವಸ್ತುಗಳಲ್ಲಿ ಸಕ್ಕರೆಯ ಅಂಶ ಹೆಚ್ಚಿರುತ್ತದೆ ಎಂದು ಅರ್ಥ. ಏಕದಳ ಧಾನ್ಯಗಳು, ಬೆಲ್ಲ, ಸಕ್ಕರೆ, ಜೇನು, ಹಣ್ಣು ಗಡ್ಡೆ ಗೆಣಸುಗಳಲ್ಲಿ ಸಕ್ಕರೆಯ ಅಂಶ ಹೆಚ್ಚು. ದ್ವಿದಳ ಧಾನ್ಯ ಮತ್ತು ಮಾಂಸದಲ್ಲಿ ಪ್ರೋಟೀನ್ ಹೆಚ್ಚು ಇರುತ್ತದೆ. ಎಣ್ಣೆ, ಬೆಣ್ಣೆ ಹಾಗೂ ಬೀಜಗಳಲ್ಲಿ ಕೊಬ್ಬಿನ ಅಂಶ ಹೆಚ್ಚು ಇರುತ್ತದೆ.

ಮೂರನೆಯದಾಗಿ ಒಂದಿಷ್ಟು ಪ್ರಮಾಣದ ಆಹಾರದಿಂದ ದೊರಕುವ ಕ್ಯಾಲೋರಿ ಎಷ್ಟು ಎಂದು ಲೆಕ್ಕಾಚಾರ ಮಾಡುವುದು. ಇದಕ್ಕಾಗಿ ಒಂದು ಸರಳವಾದ ಮಾಹಿತಿ ಇಲ್ಲಿದೆ:- 100 ಕ್ಯಾಲೋರಿ ಶಕ್ತಿ ನೀಡುವ ಆಹಾರ ಪದಾರ್ಥಗಳು ಮತ್ತು ಅದರ ಪ್ರಮಾಣ-ಒಂದು ಚಪಾತಿ, ಒಂದು ಪೂರಿ, ಒಂದು ಇಡ್ಲಿ, ಒಂದು ವಡೆ, ಅರ್ಧ ದೋಸೆ, ಒಂದು ಕಪ್ ಅವಲಕ್ಕಿ, ಅರ್ಧ ಕಪ್ ಉಪ್ಪಿಟ್ಟು, ಅರ್ಧ ಕಪ್ ಬೇಳೆ ಕಾಳು, ಒಂದು ಸ್ಲೈಸ್ ಬ್ರೆಡ್ಡು, ಮೂರು ಬಿಸ್ಕತ್ತು, ಒಂದು ಕಪ್ ಅನ್ನ, ಒಂದು ಗ್ಲಾಸ್ ದನದ ಹಾಲು, ಒಂದು ಗ್ಲಾಸ್ ಮೊಸರು, ಎರಡು ಗ್ಲಾಸ್ ಮಜ್ಜಿಗೆ, ಅರ್ಧ ಕಪ್ ಚಹಾ ಅಥವಾ ಕಾಫೀ, ಮೂರು ಚಮಚ ಬೆಣ್ಣೆ, ಎರಡೂವರೆ ಚಮಚ ಎಣ್ಣೆ ಮತ್ತು ತುಪ್ಪ, ಇಪ್ಪತ್ತೈದು ಗ್ರಾಂನಷ್ಟು ಹಣ್ಣು

ಒಬ್ಬ ಮಧುಮೇಹಿಯು ದಿನಕ್ಕೆ ಐವತ್ತು ಗ್ರಾಂನಷ್ಟು ಹಣ್ಣನ್ನು ಸೇವಿಸಬಹುದು. ಸೊಪ್ಪು ಮತ್ತು ಹಸಿರು ತರಕಾರಿಗಳಿಂದ ಲಭ್ಯವಾಗುವ ಕ್ಯಾಲೋರಿ ಅತ್ಯಂತ ಕಡಿಮೆ. ಹಾಗಾಗಿ ಇವುಗಳನ್ನು ಎಷ್ಟು ಬೇಕಾದರೂ ತಿನ್ನಬಹುದು. ಇದರಲ್ಲಿರುವ ನಾರು ಪದಾರ್ಥವು ಮಧುಮೇಹಿಗಳಿಗೆ ಸಾಮಾನ್ಯವಾಗಿ ಕಂಡುಬರುವ ಮಲಬದ್ಧತೆಯನ್ನು ಹೋಗಲಾಡಿಸುವುದು. ಶುದ್ಧ ಮಾಂಸಾಹಾರಿಗಳು ಮತ್ತು ಮದ್ಯಪಾನ ಮಾಡುವವರಿಗೆ ಸೇವಿಸುವ ಕ್ಯಾಲೋರಿಗಳನ್ನು ನಿಯಂತ್ರಣ ಮಾಡುವುದು ಕಷ್ಟ. ಎಲ್ಲಾ ಆಹಾರವನ್ನು ಒಮ್ಮೆಲೆ ತಿನ್ನುವುದಕ್ಕಿಂತ ಊಟ ಮತ್ತು ಹಣ್ಣು ಸೇವನೆ ಅಥವಾ ಹಾಲು ಸೇವನೆಗಳ ಮಧ್ಯೆ ಅಂತರವಿದ್ದರೆ ಒಳ್ಳೆಯದು.

ಸಿಹಿಮೂತ್ರ ರೋಗಕ್ಕೆ ಕೃತಕವಾಗಿ ತಯಾರಿಸಿದ ಇನ್ಸುಲಿನ್ ಸೇರಿದಂತೆ ಇನ್ನೂ ಹಲವು ಉತ್ತಮ ಔಷಧಿಗಳಿರುವುದರಿಂದ ಶರ್ಕರಪಿಷ್ಟಗಳನ್ನು ಸೇವಿಸುವ ಬಗ್ಗೆ ಅಷ್ಟೊಂದು ಹಿಂಜರಿಯಬೇಕಿಲ್ಲ. ಆದರೂ ಆದಷ್ಟು ಸಿಹಿಪದಾರ್ಥಗಳನ್ನು ತಿನ್ನದಿದ್ದರೆ ಸೇವಿಸಬೇಕಾದ ಔಷಧದ ಪ್ರಮಾಣ ಕಡಿಮೆಯಾಗುವುದು ಅಷ್ಟೇ ಅಲ್ಲದೆ ರಕ್ತದಲ್ಲಿನ ಸಕ್ಕರೆಯ ಅಂಶವು ಪದೇ ಪದೇ ಏರುಪೇರಾಗದೆ ಒಂದೇ ರೀತಿ ಇರುವುದರಿಂದ ಸಿಹಿಮೂತ್ರ ರೋಗದ ದುಷ್ಪರಿಣಾಮಗಳನ್ನು ತಡೆಗಟ್ಟಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

## ವಿಜ್ಞಾಪನೆ

ಶ್ರೀಶಾರದಾ ಪತ್ರಿಕೆಯು ಪ್ರತಿ ತಿಂಗಳು 15ನೇ ತಾರೀಕು ಬಿಡುಗಡೆಯಾಗಿ ಅಂಚೆಗೆ ರವಾನೆಯಾಗುತ್ತಿರುವ ವಿಷಯ ತಮಗೆಲ್ಲರಿಗೂ ತಿಳಿದಿದೆ. ಪತ್ರಿಕೆಯನ್ನು ಸಿದ್ಧಪಡಿಸಲು ಕನಿಷ್ಠ 1 ವಾರದ ಕಾಲಾವಕಾಶ ಬೇಕಾಗುವುದರಿಂದ, ಸಮಾಜಬಾಂಧವರು ಹಾಗೊ ಸಂಘ ಸಂಸ್ಥೆಗಳು ತಮ್ಮ ಲೇಖನ, ಸುದ್ದಿ, ಸಮಚಾರ, ಪ್ರಕಟಣೆ ಇತ್ಯಾದಿಗಳನ್ನು ಪ್ರತಿ ತಿಂಗಳು 8ನೇ ತಾರೀಕಿನ ಒಳಗೆ ಪತ್ರಿಕೆಯ ಕಛೇರಿಗೆ ಬರಹ ಮೂಲಕ ಕಳುಹಿಸಲು ಕೋರಲಾಗಿದೆ. ಕೊನೆಯ ಘಳಿಗೆಯಲ್ಲಿ ಬಂದ ಸುದ್ದಿ ಸಮಾಚಾರಗಳನ್ನು ಅದೇ ತಿಂಗಳ ಪತ್ರಿಕೆಯಲ್ಲಿ ಪ್ರಕಟಿಸಲು ಅನಾನುಕೂಲವಾಗುತ್ತದೆ.

ಸಮಾಜಬಾಂಧವರು ಮುಖ್ಯವಾಗಿ ಮಹಿಳೆಯರು ಮತು ಮಕ್ಕಳು ಅಧಿಕ ಸಂಖ್ಯೆಯಲ್ಲಿ ಲೇಖನ, ಚುಟುಕ, ನಗೆಹನಿ, ಅನಿಸಿಕೆ, ಪ್ರವಾಸ ಕಥನ, ಹೊಸೆ ಹೊಸ ಬೆಳವಣಿಗೆ, ಸಾಧನೆ ಇತ್ಯಾದಿಗಳನ್ನು ಕಳುಹಿಸಿ ನಮ್ಮ ಸಮಾಜದ ನೆಚ್ಚಿನ ಪತ್ರಿಕೆಯಾದ 'ಶ್ರೀಶಾರದಾ'ವನ್ನು ಇನ್ನಷ್ಟು ಅಭಿವೃದ್ಧಿಪಡಿಸಲು ನೆರವಾಗಬೇಕಾಗಿ ವಿನಂತಿ.

ಸಮಾಜ ಬಾಂಧವರು ಲೇಖನ, ಫೋಟೋ ಇತ್ಯಾದಿಗಳನ್ನು ಪತ್ರಿಕೆಯ ಈ ಕೆಳಗಿನ ಇ-ಮೈಲ್ ವಿಳಾಸಕ್ಕೂ ಕಳುಹಿಸಬಹುದು.

Srisharadaudupi@yahoo.co.in — ಸಂಪಾದಕ ಮಂಡಳಿ

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ಚರ್ಚ್ ರಸ್ತೆ, ಮಂಗಳೂರು - 3

ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ತಾ.14-05-2011ರ ಶನಿವಾರ ಸಂಜೆ ನಡೆಯುವ ಶಂಕರ ಜಯಂತಿ ಆಚರಣಾ ಕಾರ್ಯಕ್ರಮದಲ್ಲಿ ಮಕ್ಕಳಿಗಾಗಿ ಶ್ಲೋಕ ಪಠಣ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಹಿರಿಯರು ತಮ್ಮ ಮಕ್ಕಳಿಗೆ ಶ್ಲೋಕಗಳನ್ನು ಸುಲಲಿತವಾಗಿ ಪಠಿಸಲು ಪ್ರೋತ್ಸಾಹಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ. ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಶ್ರೀ ಬಿ. ಕೆ. ಮಾಧವರಾಯರ ಸಂಸ್ಕೃತ ವಿದ್ಯಾ ಪ್ರಚಾರ ನಿಧಿಯಿಂದ ಬಹುಮಾನ ನೀಡಲಾಗುವುದು.

ಶ್ಲೋಕ ಪಠಣ ಸ್ಪರ್ಧೆಯ 4 ಶ್ಲೋಕಗಳು : **1) ಗಣೇಶ ಪಂಚರತ್ನಂ 2) ಅನ್ನಪೂರ್ಣಾಷ್ಟಕಂ 3) ಲಲಿತಾ ಪಂಚರತ್ನಂ 4) ಶಿವಪಂಚಾಕ್ಷರ ಸ್ತೋತ್ರಂ) - ಶ್ಲೋಕಗಳ ಪ್ರತಿಗಳು ಶ್ರೀಸಭಾದಲ್ಲಿ ಲಭ್ಯ.**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ : ಶ್ರೀ ಕರುಣ ರಾವ್, ಬೆಳ್ಳೆ. ಮೊಬೈಲ್ : 9243309120, ಶ್ರೀ ಪಿ. ಶ್ರೀಕಾಂತ ರಾವ್, ಮೊಬೈಲ್ : 9343361618





**PRAMOD**
AUTOMOBILES
KARANGALPADY, MANGALORE -575 003.

30 Years of Service

Ph : 2493633 (O)
2493633 (H.O.)
2212723 (R)
Mobile : 9448260225

: Wholesale & Retail Dealers in :
2 & 3 WHEELERS SPARES & ACCESSORIES

Prop. :Ln.K. HARSHA KUMAR

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**



Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)


## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಬುಧವಾರ : **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.21-04-2011) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.14-05-2011 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.22-04-2011 ಫಾಲ್ಗುಣ ಮಾಸ ಕೃಷ್ಣಪಕ್ಷ ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀ ಬಾಲಗಣಪತಿ, ಪ್ರಸನ್ನ ಪಾರ್ವತಿ ದೇವಸ್ಥಾನ

ಉದಯಾದ್ರಿ, ಪಡುಬಿದ್ರಿ

ತಾ.25-04-2011 ಸೋಮವಾರದಂದು
ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಶ್ರೀ ದೇವರ
''*ಪ್ರತಿಷ್ಠಾ ಮಹೋತ್ಸವ*''ವು ಜರಗಲಿರುವುದು
ಈ ಕಾರ್ಯಕ್ರಮದ ಅಂಗವಾಗಿ ಮಧ್ಯಾಹ್ನ ಅನ್ನಸಂತರ್ಪಣೆ, ರಾತ್ರಿ ರಂಗಪೂಜೆ ಜರಗಲಿರುವುದು. ಭಕ್ತಾಭಿಮಾನಿಗಳಾದ ತಾವೆಲ್ಲರೂ ಶ್ರೀದೇವರ ಕಾರ್ಯಕ್ರಮಕ್ಕೆ ಬಂದು ಶ್ರೀದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ

— ಆಡಳಿತ ಮೊಕ್ತೇಸರರು,
ಶ್ರೀ ಬಾಲಗಣಪತಿ, ಪ್ರಸನ್ನ ಪಾರ್ವತಿ ದೇವಸ್ಥಾನ, ಉದಯಾದ್ರಿ, ಉಡುಪಿ.





**RAJESH POWER PRESS**
PRINTERS & PUBLISHERS
DARBE, PUTTUR, DA. KA. -574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

**ಎಮ್. ದೇವಾನಂದ್ ಭಟ್** Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ




**ಬೆಳ್ವಾಯಿ-574213**
(08258)-276177 (O), (918258)-324133 (O), 276777 (R)
ಎಡಪದವು - **574 164** (0824)-256374 (O) ಮಂಗಳೂರು, ದ.ಕ.


## ರಾಮಾ ಅಟೋಮೊಬೈಲ್ಸ್

ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
**ಫೋನ್ : 2454355, ಮೊಬೈಲ್ : 94485 45702**



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ




Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org